ತಿಂಗಳ ಪತ್ರಿಕೆ

ಜೂನ್ : 1998

* ಬರ್ಬರ ಕೃತ್ಯಕ್ಕೆ ಧಾರ್ಮಿಕ ಅಮಲಿನ ರಕ್ಷೆ
* ಸ್ವಾತಂತ್ರ್ಯ ಸಂಗ್ರಾಮದ ಅದೃಶ್ಯ ಹೋರಾಟಗಾರ್ತಿಯರು
* ಕುಂತಿ - ಒಂದು ಅನಿಸಿಕೆ
* ಬಿರುಗಾಳಿ

ಮಾನಸ

ತಿಂಗಳ ಪತ್ರಿಕೆ

ಸಂಪುಟ : 13 ಸಂಚಿಕೆ : 5
ಜೂನ್ : 1998

ಸಂಪಾದಕೀಯ ಮಂಡಳಿ :
ರಾಜೇಶ್ವರಿ ಎಚ್. ಎಸ್.
ಚಂಪಾವತಿ ಎಚ್. ಎಸ್., ಸರಸ್ವತಿ ದು.
ಸವಿತ ಎ., ಗಾಯತ್ರಿ ವಿ., ಗೀತಾ,
ಬಿ. ಎನ್. ಮಧುಮತಿ, ಶಾರದ

ಸಲಹೆ - ಸಹಕಾರ :
ಇಳಾ ವಿಜಯಾ

ಸಹ ಸಂಪಾದಕರು :
ವನಜಾ ವೆಂ.
ನೀಲಾಂಜನ

ವಿಳಾಸ :
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ ಪೋಸ್ಟ್
ಬೆಂಗಳೂರು - 560 067

ಸೂಚನೆ : ಬಿಡಿ ಪ್ರತಿ **3-00** ರೂ.
ವಾರ್ಷಿಕ ಚಂದಾ **40-00** ರೂ.

ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ....

ಮೈಸೂರಿನಲ್ಲಿರುವ ಓದುಗರು

"ಮಾನಸ"

ಪ್ರತಿಗಳಿಗಾಗಿ ಹಾಗೂ ಚಂದಾ
ನವೀಕರಣಕ್ಕಾಗಿ ಸಂಪರ್ಕಿಸಿ

ವೆಂ. ವನಜ

ಎಲ್. 3, ಏಳನೇ ತಿರುವು, ವಿ.ವಿ. ವಸತಿ ಗೃಹ
ಮಾನಸ ಗಂಗೋತ್ರಿ, ಮೈಸೂರು - 570 006

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ
ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು - ೫೬೦ ೦೬೭

ಸಂಪಾದಕೀಯ



ಒಂದು ದಶಕದ ಹಿಂದೆ ರೂಪಾ ಕನ್ವರ್ ತನ್ನ ರೋಗಿಷ್ಠ ಪತಿ ಮರಣ ಹೊಂದಿದಾಗ, ಪತಿಯ ಚಿತೆಯೇರಿ ಸತ್ತಿ ಹೋದ ಸುದ್ದಿ ಆಘಾತಕಾರಿಯಾಗಿದ್ದರೂ, ನಂತರ ಅವಳ ಹೆಸರಿನಲ್ಲಿ ದೇವಸ್ಥಾನ ನಿರ್ಮಿಸಿ, ಜಾತ್ರೆ ಮಾಡಿ, ಕತ್ತಿಗಳ ಮೆರವಣಿಗೆ ಮಾಡುವುದರ ಮೂಲಕ 'ಸತಿ'ಯನ್ನು ವೈಭವೀಕರಿಸಿದ್ದು ಅಪಾಯಕಾರಿಯಾದುದು. ಈ ಮೂಲಕ ಸನಾತನ ಮೌಲ್ಯಗಳನ್ನು ಪ್ರತಿಪಾದಿಸುತ್ತ, ಧಾರ್ಮಿಕ ಸನ್ನಿ ಸ್ವರೂಪವನ್ನು ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಪ್ರತಿನಿಧಿಸಿದ್ದರು. ಅಂದು ವ್ಯಕ್ತವಾದ ಧಾರ್ಮಿಕ ಅಮಲು ಇಂದು ರಾಜಕೀಯ ಅಧಿಕಾರದ ಕೃಪಾಕಟಾಕ್ಷವನ್ನು ಪಡೆದಿದೆ. ಧಾರ್ಮಿಕ ಅಮಲು, ರಾಜಕೀಯ ಅಧಿಕಾರದೊಂದಿಗೆ ಬೆರೆತು, ರಾಜಾಸ್ಥಾನದಲ್ಲಿ ಮಹಿಳೆಯರ ಪ್ರತಿಭಟನೆಯ ದನಿಯನ್ನೂ ಅಮಾನುಷವಾಗಿ ಹತ್ತಿಕ್ಕುತ್ತಿದೆ.

ಜೆ. ಸಿ. ಬೋಸ್ ಹಾಸ್ಟೆಲ್ ಪ್ರಕರಣ ನಮ್ಮ ಮುಂದೆ ಮಹಿಳೆಯರ ಪ್ರತಿಭಟಿಸುವ ಹಕ್ಕಿಗೆ ಸಂಬಂಧಿಸಿದ ಹಾಗೆ ಹಲವಾರು ಸಂಕೀರ್ಣ ಪ್ರಶ್ನೆಗಳನ್ನು ಹಾಗೂ ಸವಾಲುಗಳನ್ನು ನಮ್ಮ ಮುಂದಿಟ್ಟಿದೆ. ಒಮ್ಮೆ ಅಮಾನುಷ ಲೈಂಗಿಕ ಅತ್ಯಾಚಾರಕ್ಕೆ ಒಳಗಾದ ರಿಚಾ, ತನ್ನ ಮೇಲೆ ನಡೆದ ಲೈಂಗಿಕ ಶೋಷಣೆಯನ್ನು ಪ್ರತಿಭಟಿಸುವ ಧೈರ್ಯ ತೋರಿದಾಗ ಅವಳ ಅಸ್ತಿತ್ವವನ್ನು ಉಡುಗಿಸುವ ಉದ್ದೇಶದಿಂದ ಅವಳ ಮೇಲೆ ಪುನಃ ಗುಂಪು ಅತ್ಯಾಚಾರ ನಡೆಸಲಾಗಿದೆ. ರಾಜಾಸ್ಥಾನದ ಮಹಿಳಾ ಸಂಘಟನೆಗಳು, ಈ ಪ್ರಕರಣದ ವಿರುದ್ಧ ಪ್ರಬಲವಾದ ಪ್ರತಿಭಟನೆಯನ್ನು ಮಾಡುತ್ತಿರುವುದರ ನಡುವೆಯೇ ಪುನಃ ಈ ಅಕೃತ್ಯವನ್ನು ನಡೆಸಲಾಗಿದೆ. ಸ್ತ್ರೀಯರಿಗಿರುವ ಪ್ರತಿಭಟಿಸುವ ಹಕ್ಕಿನ ಚ್ಯುತಿಯಾಗಿದೆ. ಭಾರತೀಯ ಸಂದರ್ಭದಲ್ಲಿ ಪ್ರತಿಭಟಿಸುವುದೇ ದುಸ್ತರವಾಗಿರುವಾಗ ಪ್ರತಿಭಟಿಸುವ ದನಿಗಳನ್ನು ಸಂಪೂರ್ಣವಾಗಿ ನಾಶಪಡಿಸುವ ಹಿತಾಸಕ್ತಿಗಳ ವಿರುದ್ಧ ಸಿಡಿದೇಳಬೇಕಾಗುತ್ತದೆ.

'ಅತ್ಯಾಚಾರ' ಪುರುಷ ಪ್ರಧಾನ ಮೌಲ್ಯಗಳ ಒಂದು ಅಸ್ತ್ರ. ಈ ಅಸ್ತ್ರದೊಂದಿಗೆ, ರಾಜಕೀಯ ಹಿತಾಸಕ್ತಿಗಳು, ಆರ್ಥಿಕ ಹಾಗೂ ಧಾರ್ಮಿಕ ಹಿತಾಸಕ್ತಿಗಳು, ತಳುಕು ಹಾಕಿಕೊಂಡಿರುವುದು ಹಾಗೂ ಪರಸ್ಪರ ಪೂರಕವಾಗಿ ಕೆಲಸ ಮಾಡುವುದನ್ನು ರಾಜಾಸ್ಥಾನದಲ್ಲಿ ನಡೆಯುತ್ತಿರುವ ಅತ್ಯಾಚಾರದ ಪ್ರಕರಣಗಳು ಎತ್ತಿ ತೋರಿಸುತ್ತಿವೆ.

ಜೆ. ಸಿ. ಬೋಸ್ ಪ್ರಕರಣ, ಬನ್ವಾರಿದೇವಿ, ಬೀನ್‌ಮಾಲ್ ಪ್ರಕರಣಗಳಲ್ಲಿ ಈ ಅಂಶಗಳು ಪ್ರಭಾವ ಬೀರುತ್ತಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಸನಾತನ ಧರ್ಮವನ್ನು ಎತ್ತಿ ಹಿಡಿಯುತ್ತಲೇ, ಸ್ತ್ರೀಯರನ್ನು ತಾಯಿ, ದೇವಿ, ಮಾತೆ ಎಂದು ಪೂಜಿಸುತ್ತಲೇ, ಸ್ತ್ರೀಯರನ್ನು ಅಮಾನುಷವಾಗಿ ತುಳಿಯುತ್ತಿರುವ ಭಾರತೀಯ ಜನತಾ ಪಕ್ಷದ, ಮುಖ್ಯಮಂತ್ರಿ ಶೇಖಾವತ್ ರಾಜಕೀಯ ಕಾರಣಕ್ಕಾಗಿ ಜನಾಂಗೀಯ ಹಿತಾಸಕ್ತಿಗಳನ್ನು ರಕ್ಷಿಸುತ್ತಿರುವುದು ಕಣ್ಣಿಗೆ ರಾಚುವ ಸತ್ಯವಾಗಿದೆ.

ರಾಜಾಸ್ಥಾನದಲ್ಲಿ ನವ ಶ್ರೀಮಂತ ವಿದ್ಯಾರ್ಥಿ ವರ್ಗಕ್ಕೆ ಇಂದು ರಾಜಕೀಯ ಕುಮ್ಮಕ್ಕು ದೊರೆಯುತ್ತಿದೆ. ಈ ವರ್ಗ ತನ್ನ ಆರ್ಥಿಕ ಶಕ್ತಿಯ ಪ್ರಬಲತೆಯಿಂದಾಗಿ ರಾಜಕೀಯ ಪ್ರಭಾವವನ್ನು ಗಳಿಸುತ್ತಿದೆ. ಪಕ್ಷ, ಜನಾಂಗ, ಜಾತಿ ಮುಂತಾದ ಹಿತಾಸಕ್ತಿಗಳ ರಕ್ಷಣೆಯಲ್ಲಿ ಸ್ತ್ರೀಯರಿಗೆ ದೊರೆಯಬೇಕಾದ ನ್ಯಾಯವನ್ನು ವಂಚಿಸಲಾಗುತ್ತಿದೆ.

ರಾಜಾಸ್ಥಾನದಲ್ಲಿ ಸ್ತ್ರೀಯರ ಮೇಲೆ ನಡೆಯುತ್ತಿರುವ ಹಿಂಸೆಯು ತೀವ್ರ ಪ್ರಮಾಣದಲ್ಲಿ ಹೆಚ್ಚುತ್ತಿರುವುದನ್ನು ಅಂಕಿ ಅಂಶಗಳು ಸಾಬೀತು ಪಡಿಸಿವೆ. ಪುರುಷ ಪ್ರಧಾನ ಮೌಲ್ಯಗಳೊಂದಿಗೆ, ಜಾತಿ, ಜನಾಂಗೀಯ ಹಿತಾಸಕ್ತಿ, ಆರ್ಥಿಕ ಪ್ರಜ್ವಲತೆ, ಸನಾತನ ಮೌಲ್ಯಗಳನ್ನು ಪ್ರತಿಪಾದಿಸುವ ಪಕ್ಷದ ಹಿತಾಸಕ್ತಿಯನ್ನು ಒಟ್ಟೊಟ್ಟಿಗೆ ಪ್ರತಿಭಟಿಸುವ ಸವಾಲು ಸ್ತ್ರೀ ಸಂಘಟನೆಗಳ ಮುಂದಿದೆ.

ಬರ್ಬರ ಕೃತ್ಯಕ್ಕೆ ಧಾರ್ಮಿಕ ಅಮಲಿನ ರಕ್ಷೆ

ಸಂಪ್ರದಾಯ ಹಿಂದೂ ಧರ್ಮವನ್ನು ಎತ್ತಿ ಹಿಡಿಯುವ, ಧರ್ಮಕ್ಕಾಗಿ ಜೀವನವನ್ನು ಸಮರ್ಪಣೆ ಮಾಡಿಕೊಳ್ಳುತ್ತೇವೆಂಬ ಅಮಲಿನ ಭಾರತೀಯ ಜನತಾ ಪಕ್ಷ ಆಡಳಿತ ನಡೆಸುತ್ತಿರುವ ರಾಜಾಸ್ಥಾನದಲ್ಲಿ ಇಂದು ಮಹಿಳೆ ಅತ್ಯಂತ ಅಮಾನುಷ ದಬ್ಬಾಳಿಕೆ, ಹಿಂಸೆ, ಕ್ರೂರವಾದ ಶೋಷಣೆಗೆ ಒಳಗಾಗಿದ್ದಾಳೆ. ರಾಜಾಸ್ಥಾನದಲ್ಲಿ ಸ್ತ್ರೀಯರ ಮೇಲೆ ನಡೆಯುತ್ತಿರುವ ಈ ಹಿಂಸೆ ಕುರಿತು ವಿವಿಧ ಮಾಧ್ಯಮಗಳು ಅಂಕಿ ಅಂಶಗಳ ಮೂಲಕ ಸಾಬೀತು ಪಡಿಸಿವೆ. ಜೆ. ಸಿ. ಬೋಸ್ ಹಾಸ್ಟೆಲಿನಲ್ಲಿ ನಡೆದ ಪ್ರಕರಣ ರಾಷ್ಟ್ರಾದ್ಯಂತ ಪ್ರತಿಭಟನೆಯ ಅಲೆಯನ್ನು ಸೃಷ್ಟಿಸಿದ್ದು ಕೇವಲ ಇತಿಹಾಸವಲ್ಲ. ಅತ್ಯಾಚಾರಕ್ಕೊಳಗಾದ ಮಹಿಳೆ, ತನಗಾದ ಅನ್ಯಾಯವನ್ನು ಪ್ರತಿಭಟಿಸಿದ ಕಾರಣಕ್ಕೆ ಪುನಃ ಅತ್ಯಾಚಾರಕ್ಕೆ ಒಳಗಾಗಿರುವುದು, ಮನುಷ್ಯತ್ವ, ಮಾನವೀಯತೆ ನಶಿಸಿಹೋಗಿ, ಪೈಶಾಚಿಕ ನಡವಳಿಕೆಗಳಿಗೆ ಧಾರ್ಮಿಕ ಅಮಲು ಬೆಂಬಲ ನೀಡಿ ಸಮರ್ಥಿಸುತ್ತಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಸನಾತನ ಧರ್ಮವನ್ನು ಎತ್ತಿಹಿಡಿಯುವ ಅಮಲು ಎಂತಹ ಬರ್ಬರ, ರಾಕ್ಷಸೀ ಕೃತ್ಯವನ್ನು ಸಮರ್ಥಿಸಿಕೊಳ್ಳಬಹುದೆಂಬುದಕ್ಕೆ ಜೆ.ಸಿ. ಬೋಸ್ ಹಾಸ್ಟೆಲ್ ಪ್ರಕರಣವೇ ಸಾಕ್ಷಿ.

ಮಧ್ಯಮ ವರ್ಗದ ಅಶೋಕಶರ್ಮ ದಂಪತಿಗಳಿಗೆ ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ. ಇವರ ಎರಡನೆಯ ಮಗಳು ರಿಚಾ ಇಪ್ಪತ್ತೇಳು ವರ್ಷ ವಯಸ್ಸಿನವಳು.

೧೯೯೭ ಸೆಪ್ಟೆಂಬರ್ ೫ ಶರ್ಮ ದಂಪತಿಗಳ ಜೀವನದಲ್ಲಿ ಮರೆಯಲಾಗದ ದುರ್ದಿನ. ಪೊಲೀಸರು ಫೋನು ಮಾಡಿ ಅವರ ಮಗಳು ಅತ್ಯಾಚಾರಕ್ಕೆ ಒಳಗಾದ ವಿಷಯವನ್ನು ತಿಳಿಸಿದ್ದರು. ರಿಚಾಳನ್ನು ಬಲವಂತದಿಂದ ಸ್ಥಳೀಯ ವಿಶ್ವವಿದ್ಯಾನಿಲಯದ ಜೆ.ಸಿ. ಬೋಸ್ ಹುಡುಗರ ಹಾಸ್ಟೆಲ್‌ಗೆ ಕರೆದೊಯ್ದು ಒಂಬತ್ತು ಜನರು ಅವಳ ಮೇಲೆ ಅತ್ಯಾಚಾರ ವೆಸಗಿದರು. ಅವರ ಪ್ರತಿರೋಧವನ್ನು ಕಡೆಗಣಿಸಿ ಒಂಬತ್ತು ಪಶುಗಳು ಅವಳ ಮೇಲೆ ಅತ್ಯಾಚಾರವೆಸಗುತ್ತಿದ್ದಾಗ, ಕೋಣೆಯ ಹೊರಗಡೆ ಹತ್ತು, ಹದಿನೈದು ಜನರು ಗುಂಪಾಗಿ ನಿಂತಿದ್ದು, ಅಮಾನುಷ ಹಿಂಸೆಯ ವಿಜಯೋತ್ಸವವನ್ನು ಆಚರಿಸುತ್ತಿದ್ದರು. ಆರೋಪಿಗಳು ಯುದ್ಧದಲ್ಲಿ ಗೆದ್ದ 'ನಾಯಕ'ರಂತೆ ಹೊರಗೆ ಬಂದು ಅವರಿಗಾಗಿ ಕಾಯುತ್ತಿದ್ದ ಟಾಟಾ ಸುಮೋದಲ್ಲಿ ಪಾರ್ಟಿ ಕೊಡುವ ಉದ್ದೇಶದಿಂದ ಮಾಯವಾದರು. ರಿಚಾ ಕೇವಲ ಒಮ್ಮೆ ಬಲಿಪಶುವಲ್ಲ, ಒಮ್ಮೆ ಅಮಾನುಷ ಲೈಂಗಿಕ ಹಿಂಸೆಗೆ ಬಲಿಯಾದ ರಿಚಾ, ಪುನಃ...... ಹಾಗೆ.... ವಿಷಚಕ್ರ....... ಹೀಗೆ ಏಳು ವರ್ಷಗಳಲ್ಲಿ ಹದಿನೈದು ಜನರು ಅವಳನ್ನು ಅತ್ಯಾಚಾರಕ್ಕೆ ಗುರಿ ಮಾಡಿದರು. ಶರ್ಮ ದಂಪತಿಗಳ ಮನೆಯ ಎದುರಿಗಿದ್ದ ಹಾಸ್ಟೆಲಿನ ಹುಡುಗನೊಬ್ಬನ ಕಾರಣದಿಂದ ಹಾಸ್ಟೆಲಿನ ಹುಡುಗರೆಲ್ಲಾ ಅವಳನ್ನು ಬ್ಲಾಕ್‌ಮೇಲ್ ಮಾಡಿ ಬಳಸಿಕೊಳ್ಳತೊಡಗಿದರು. ವಿಶ್ವವಿದ್ಯಾನಿಲಯದ ಕ್ರೀಡಾಮಂಡಳಿಯ ಮೇಲ್ವಿಚಾರಕಿಯಾಗಿದ್ದ ತಾರಾ ಚೌಧರಿ ಹುಡುಗಿಯರನ್ನು ಬುಕ್ ಮಾಡುತ್ತಿದ್ದಳು. ಹುಡುಗಿಯರನ್ನು ಬಳಸಿಕೊಳ್ಳುವ ಈ ಜಾಲವನ್ನು ಕುರಿತ ಪ್ರಕರಣಗಳು ಬಯಲಿಗೆ ಬರುತ್ತಿದ್ದ ಹಾಗೆ ರಿಚಾ ತನ್ನ ಮೇಲೆ ನಡೆದ ಅಮಾನುಷ ಕ್ರೌರ್ಯವನ್ನು ಸಾರ್ವಜನಿಕರೆದುರು ತೆರೆದಿಡಲು ನಿಶ್ಚಯಿಸಿದಳು. ತನ್ನ ಮೇಲೆ ನಡೆಯುತ್ತಿರುವ ಇಂತಹ ಅಮಾನುಷ ಲೈಂಗಿಕ ಹಿಂಸೆ ಇತರ ಹೆಣ್ಣು ಮಕ್ಕಳ ಮೇಲೆ ನಡೆಯಬಾರದೆಂಬ ಕಾಳಜಿಯ ಜೊತೆಗೆ ಆರೋಪಿಗಳಿಗೆ ಶಿಕ್ಷೆಯಾಗಲೇಬೇಕೆಂಬ ಸಂಕಲ್ಪದಿಂದ ಹೋರಾಡುತ್ತಿದ್ದಾಳೆ.

ಬರ್ಬರ ಕೃತ್ಯ ನಡೆದ ನಂತರ ರಿಚಾ ದೂರು ನೀಡಲು ಎರಡು ಕಿ.ಮೀ. ದೂರ ನಡೆಯಬೇಕಾಯಿತು. ಮಹಿಳಾ ಸಂಘಟನೆಗಳು, ವೈದ್ಯಕೀಯ ಪರೀಕ್ಷೆಗಾಗಿ ಮುಖ್ಯಮಂತ್ರಿ ಶೇಖಾವತ್ ಮೇಲೆ ಬಲವಾದ ಒತ್ತಡವನ್ನು ತಂದ ಕಾರಣ ವೈದ್ಯಕೀಯ ಮಂಡಳಿ ವೈದ್ಯಕೀಯ ಪರೀಕ್ಷೆಯನ್ನು ನಡೆಸಿತು. ರಿಚಾ ಅಷ್ಟರೊಳಗೆ ತನ್ನ ಒಳ ಉಡುಪನ್ನು ಒಗೆದು ಹಾಕಿದ್ದಳು. ಅತ್ಯಗತ್ಯವಾದ ವೈದ್ಯಕೀಯ ಪುರಾವೆಯು ನಾಶವಾಗಿತ್ತು. ಒಂಬತ್ತು ತಿಂಗಳು ಕಳೆದರೂ, ಒಂಬತ್ತು ಆರೋಪಿಗಳಲ್ಲಿ 3 ಜನರನ್ನು ಬಂಧಿಸಲು ಪೊಲೀಸರಿಂದ ಸಾಧ್ಯವಾಗಲಿಲ್ಲ. ರಿಚಾ ನೀಡಿದ ಲೈಂಗಿಕ ಹಿಂಸೆಯ ದೂರಿನಲ್ಲಿ ಆರೋಪಿಸಿದ 15 ಜನ ಆರೋಪಿಗಳಲ್ಲಿ ಕನಿಷ್ಠ ಒಂಬತ್ತು ಜನರನ್ನು ಪೊಲೀಸರು

ಬಂಧಿಸಲಿಲ್ಲ. ಇವರಲ್ಲಿ ಮೂರು ಜನರು ಭಾರತೀಯ ಜನತಾ ಪಕ್ಷದ ಪ್ರತಿಷ್ಠಿತ ರಾಜಕೀಯ ವ್ಯಕ್ತಿಗಳ ಸಂಬಂಧಿಕರಾಗಿದ್ದಾರೆ. ಪೊಲೀಸರು ಈ ಆರೋಪಿಗಳೆಲ್ಲಾ ನಾಪತ್ತೆಯಾಗಿದ್ದಾರೆಂದು ವರದಿ ನೀಡಿದ್ದರೂ, ಆರೋಪಿಗಳಲ್ಲೊಬ್ಬನಾದ ಡಿ.ವೈ.ಎಸ್.ಪಿ. ಕಷ್ಣನಯ್ಯ ಜೈಪುರದಲ್ಲೇ ಸುಳಿದಾಡುತ್ತಿದ್ದ. ರಿಚಾಗೆ ಪೊಲೀಸು ರಕ್ಷಣೆಯನ್ನು ನೀಡಿದ್ದರೂ ಚುನಾವಣೆಯ ಸಂದರ್ಭದಲ್ಲಿ ಅದನ್ನು ವಾಪಸ್ಸು ಪಡೆಯಲಾಯಿತು. ರಿಚಾಳಿಗೆ 2 ಲಕ್ಷ ಪರಿಹಾರ ನೀಡುವುದರ ಮೂಲಕ ಕೈ ತೊಳೆದುಕೊಳ್ಳಲಾಯಿತು.

ಅತ್ಯಾಚಾರ ನಡೆದ ಸ್ಥಳದಲ್ಲಿ ದೊರೆತ ಒಂಬತ್ತು ನಿರೋಧಗಳ ಬಗ್ಗೆ ಇದುವರೆಗೂ ಹೈದರಾಬಾದ್ ಫೊರೆನ್ಸಿಕ್ ಇಲಾಖೆ ಯಾವುದೇ ವರದಿಯನ್ನು ನೀಡಿಲ್ಲ. ಇದು ಸರ್ಕಾರದ ಬೇಜವಾಬ್ದಾರಿಯೆ? ಅಥವಾ ಸಂತೃಪ್ತ ಮನೋಭಾವನೆಯೆ ಎಂದು ಅತ್ಯಾಚಾರಿ ವಿರೋಧಿ ಜನಾಂದೋಲನದ ಅಧ್ಯಕ್ಷೆ ಕವಿತಾ ಶ್ರೀ ವಾಸ್ತವ್ ಕೇಳುತ್ತಾರೆ. ವಿಧಾನಸಭೆಯಲ್ಲಿ ಈ ಪ್ರಕರಣ ಕುರಿತು ಚರ್ಚೆಯಾದರೂ, ಇದು ಜಾತಿ ಆಯಾಮವನ್ನು ಪಡೆದದ್ದು ಒಂದು ದುರಂತ. ಜನಾಂಗದ ಗೌರವವನ್ನು ಕಾಪಾಡಿಕೊಳ್ಳುವ ಅದರ ಹಿತಾಸಕ್ತಿಯನ್ನು ರಕ್ಷಿಸುವ ಉದ್ದೇಶದಿಂದ ರಿಚಾಳ ನಡತೆಯ ಬಗ್ಗೆ ವಿಧಾನ ಸಭೆಯಲ್ಲಿ ಚರ್ಚಿಸಲಾಯಿತು. ಜಾಟ್ ಜನಾಂಗಕ್ಕೆ ಸೇರಿದ ಮುಖ್ಯಮಂತ್ರಿ ಕೇವಲ ವಿಷಾದ ವ್ಯಕ್ತಪಡಿಸಿದರೆ ವಿನಃ ಅಪರಾಧಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಯಾವ ಸೂಚನೆಯನ್ನು ನೀಡಲಿಲ್ಲ. ಮತ ನೀಡುವ ಮತದಾರರ ಮನವೊಲಿಸಿಕೊಳ್ಳಲು ಜಾಟ್ ಜನಾಂಗದ 'ಪ್ರತಿಷ್ಠಿತ'ರ ರಕ್ಷಣೆ ಮಾಡುವುದು ಮುಖ್ಯಮಂತ್ರಿಗೆ ಅನಿವಾರ್ಯವಾಯಿತು.

ಆರೋಪಿಗಳಿಗಾಗಿ ರಾಜಕೀಯವಾಗಿ ನೀಡಿದ ರಕ್ಷಣೆ ಹಾಗೂ ಕುಮ್ಮಕ್ಕು ಪುನಃ ಕರಾಳ ಕೃತ್ಯಕ್ಕೆ ಪ್ರೇರಣೆ ನೀಡಿತು. ಆರೋಪಿಗಳು ತಮಗಿರುವ ರಾಜಕೀಯ ಬೆಂಬಲದ ಧೈರ್ಯದಿಂದ ಮೇ 22ರಂದು ಪುನಃ ರಿಚಾಳ ಮೇಲೆ ಧಾಳಿ ನಡೆಸಿದರು. ಅಂದು ಸಾಯಂಕಾಲ 4.30ರ ವೇಳೆಗೆ ರಿಚಾ ಕೆಲಸ ಮುಗಿಸಿ ಆಟೋರಿಕ್ಷಾಗೆ ಕಾಯುತ್ತಿದ್ದಾಗ ವಿಳಾಸ ಕೇಳುವ ನೆಪದಿಂದ ಇಬ್ಬರು ಮುಸುಕು ದಾರಿಗಳು ಅವಳ ಬಾಯಿ ಮುಚ್ಚಿಸಿ, ಎಚ್ಚರ ತಪ್ಪಿಸಿ ಮಾರುತಿ ವ್ಯಾನ್‌ನಲ್ಲಿ ಕರೆದುಕೊಂಡು ಹೋದರು. ಮುಸುಕುದಾರಿಗಳೊಡನೆ ಇನ್ನಿಬ್ಬರು ಅವಳ ಮೇಲೆ ಅತ್ಯಾಚಾರವೆಸಗಿದರು. ಮೂರು ಗಂಟೆಗಳ ಕಾಲ ಚಲಿಸುತ್ತಿದ್ದ ಕಾರಿನಲ್ಲಿ ಅವಳನ್ನು ಕಟ್ಟಿ ಹಾಕಿದರೂ ಇಬ್ಬರು ಪ್ರತಿಷ್ಠಿತ ಆರೋಪಿಗಳ ಹೆಸರನ್ನು ಕೈಬಿಡುವಂತೆ ಒತ್ತಾಯಿಸುತ್ತಿದ್ದರು. ಅವರ ಮೇಲಿನ ಹೆಸರನ್ನು ಕೈ ಬಿಡದಿದ್ದರೆ, ಅವಳನ್ನು ಅವಳ ಕುಟುಂಬವನ್ನು ಕೊಲೆ ಮಾಡುವುದಾಗಿ ಹೆದರಿಸಿದರು. ಕೊನೆಯಲ್ಲಿ ಅವಳನ್ನು ಕರೆದುಕೊಂಡು ಹೋದ ಸ್ಥಳದಲ್ಲಿ ಬಿಡಲಾಯಿತು.

ಮೇ 27ರಂದು ಶೇಖಾವತ್ ಪುನಃ ವಿಷಾದದ ನಾಟಕ ಮಾಡಿದರು. ಆಘಾತಗೊಂಡ ಅತ್ಯಾಚಾರ ವಿರೋಧಿ ಜನಾಂದೋಲನ ಮಂಚದವರು ಉಪಮುಖ್ಯಮಂತ್ರಿಯ ಮನೆಯವರೆಗೆ ಟಾರ್ಚ್‌ಲೈಟ್ ಮೆರವಣಿಗೆಯನ್ನು ಮಾಡಿದರು. ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ಮೋಹಿನಿ ಗಿರಿಯವರು ಬೆಂಬಲವನ್ನು ನೀಡಿ, ಮುಖ್ಯಮಂತ್ರಿಯವರನ್ನು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯಿಸಿದರು. ಸಿ.ಬಿ.ಐ. ತನಿಖೆಯ ಬೇಡಿಕೆಯನ್ನು ನಿರಾಕರಿಸುವ ಮುಖ್ಯಮಂತ್ರಿಯವರು ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಬದಲು ಮರೆಮಾಚಲು ಪ್ರಯತ್ನಿಸುತ್ತಿದ್ದಾರೆ.

ಪ್ರಶ್ನೆ ರಿಚಾಳ 'ನಡತೆ'ಯ ಬಗ್ಗೆಯಲ್ಲ, ಇದು ಸ್ತ್ರೀಗೆ ಅವಳ ದೇಹದ ಮೇಲಿನ ಹಕ್ಕಿನ ಪ್ರಶ್ನೆ. ಅವಳಿಗಿರುವ 'ಇಲ್ಲ'ವೆನ್ನುವ ಹಕ್ಕಿನ ಪ್ರಶ್ನೆ. ರಿಚಾಳ ಮೇಲೆ ನಡೆದ ಹಿಂಸೆ, ಅಮಾನುಷ ಕ್ರೌರ್ಯಕ್ಕೆ ಸಂಕೇತ. ತಮ್ಮ ಮೇಲೆ ನಡೆದ ಅಮಾನುಷ ಕ್ರೌರ್ಯವನ್ನು ವಿರೋಧಿಸುವ ಧೈರ್ಯ ತೋರುವ ಮಹಿಳೆಯರ ಹಕ್ಕಿನ ಚ್ಯುತಿಯಿದು ಎಂದು ಮಹಿಳಾ ಆಯೋಗದ ಇನ್ನೊಬ್ಬ ಸದಸ್ಯೆ ಸಯದ್ ಹಮೀದ್ ನುಡಿಯುತ್ತಾರೆ. ಇತ್ತೀಚೆಗೆ ರಾಜಾಸ್ಥಾನದಲ್ಲಿ ರಾಜಕೀಯವಾಗಿ ರಕ್ಷಣೆ ಪಡೆಯುತ್ತಿರುವ, ಆರ್ಥಿಕವಾಗಿ ಪ್ರಬಲವಾದ ವಿದ್ಯಾರ್ಥಿ ಮಾಫಿಯಾ ಬೆಳವಣಿಗೆಯನ್ನು ಎತ್ತಿ ತೋರಿಸುತ್ತದೆ. ಹಸುಗಳ ರಕ್ಷಣೆಗೆ ಒಂದು ಆಯೋಗವನ್ನು ರಚಿಸಿರುವ ರಾಜಾಸ್ಥಾನದಲ್ಲಿ ಒಬ್ಬ ಅಮಾಯಕ 'ಸ್ತ್ರೀ'ಗೆ ರಕ್ಷಣೆ ನೀಡುವಲ್ಲಿ ನ್ಯಾಯ ದೊರಕಿಸಿ ಕೊಡುವಲ್ಲಿ ಸರ್ಕಾರ ವಿಫಲವಾಗಿದೆ.

- ರಾಜೇಶ್ವರಿ H.S.

ಸ್ವಾತಂತ್ರ್ಯ ಸಂಗ್ರಾಮದ ಅದೃಶ್ಯ ಹೋರಾಟಗಾರ್ತಿಯರು

ಇಂದು ಭಾರತ ಸ್ವಾತಂತ್ರ್ಯ ಸುವರ್ಣೋತ್ಸವವನ್ನು ಎಲ್ಲೆಡೆ ಆಚರಿಸುತ್ತಿದೆ. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ತಮ್ಮದಾಗಿದ್ದ ಎಲ್ಲವನ್ನೂ ಸಮರ್ಪಣೆ ಮಾಡಿದ ಮಹಾಚೇತನಗಳ ಸ್ಮರಣೆಯೂ ನಮ್ಮ ಕರ್ತವ್ಯದ ಒಂದು ಭಾಗವಾಗಿ ಅಲ್ಲಲ್ಲಿ ನಡೆದಿದೆ. ಹಾಗೆಯೇ ಸಾಂದರ್ಭಿಕವಾಗಿ ಕೆಲವು ಚಾರಿತ್ರಿಕ ದಾಖಲೆಗಳ ಮೇಲೆ ಕಣ್ಣಾಡಿಸಿದಾಗ ಕಂಡುಬಂದ ಕುತೂಹಲಕರ ಅಂಶವೆಂದರೆ, ಯಾವುದೇ ಸ್ವಾತಂತ್ರ್ಯ ಹೋರಾಟಗಾರರಿಗೆ ಕಡಿಮೆಯಿಲ್ಲದಂತೆ ತಮ್ಮದೇ ಮಿತಿಯಲ್ಲಿ, ತಮ್ಮದೇ ಆದ ರೀತಿಯಲ್ಲಿ ಭಾಗವಹಿಸಿ, ಅದರಿಂದೆದುರಾದ ಕಷ್ಟ ಕಾರ್ಪಣ್ಯಗಳನ್ನು ಸದ್ದುಗದ್ದಲಕ್ಕೆಡೆಗೊಡದೆ ತಾಳ್ಮೆಯಿಂದ ಎದುರಿಸಿ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ದುಡಿದು ಮಡಿದ ಇಂದಿಗೂ ಬೆಳಕಿಗೆ ಬಾರದೆ ಕತ್ತಲಲ್ಲಿ ಹುದುಗಿಹೋದ, ಅಗಣ್ಯರಾಗಿಯೇ ಉಳಿದ ಅಸಂಖ್ಯಾತ ಮಹಿಳೆಯರೂ ಕರ್ನಾಟಕದಲ್ಲಿ ಇದ್ದರು ಎನ್ನುವುದು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ ಕಡಿಮೆಯದೇನಲ್ಲ. ಅವರು ವಹಿಸಿದ ವಿವಿಧ ಪಾತ್ರಗಳ ಆಧಾರದ ಮೇಲೆ ಅವರನ್ನು ವರ್ಗೀಕರಿಸ ಬಹುದು. ಕಮಲಾದೇವಿ ಚಟ್ಟೋಪಾಧ್ಯಾಯ, ಕೃಷ್ಣಾಬಾಯಿ ಪಣಜೀಕ್ಕರರಂಥವರು ತಮ್ಮ ಉತ್ಸಾಹ, ಚೈತನ್ಯ, ಸಂಘಟನಾ ಚತುರತೆ, ಮಾನಸಿಕ ಹಾಗೂ ದೈಹಿಕ ಶಕ್ತಿಗಳಿಂದಾಗಿ ಪುರುಷರಿಗೆ ಸಮಾನವಾಗಿ ನಾಯಕತ್ವವನ್ನು ವಹಿಸಿದರೆ, ಇನ್ನು ಕೆಲವರು ಕರ್ನಾಟಕದ ಮೂಲೆಮೂಲೆಗಳಲ್ಲಿ ಸ್ವಾತಂತ್ರ್ಯ ಚಳುವಳಿಯ ಕಾವನ್ನು ಪಸರಿಸಿದ ಸ್ಥಳೀಯ ಮುಖಂಡರಾದರು. ಇವರು ವ್ಯಕ್ತಿಗತ ಆಧಾರದ ಮೇಲೆ, ವೈಯಕ್ತಿಕ ವರ್ಚಸ್ಸಿನ ಪರಿಣಾಮವಾಗಿ ವೈಯಕ್ತಿಕವಾದ ಪ್ರಚಾರ, ಕೀರ್ತಿಯನ್ನು ಗಳಿಸಿದುದಲ್ಲದೆ ಐತಿಹಾಸಿಕವಾಗಿ ಗುರುತಿಸಲ್ಪಟ್ಟರು.' ಇವರಲ್ಲದೆ ಮಹಿಳೆಯರ ಇನ್ನೊಂದು ವರ್ಗ ಇತ್ತು. ಅದೆಂದರೆ, ಸ್ವಾತಂತ್ರ್ಯ ಸಂಗ್ರಾಮಕ್ಕೆ ಚಳುವಳಿಯ ರೂಪ ಪಡೆಯುವಂತೆ ಸಕ್ರಿಯವಾಗಿ ಭಾಗವಹಿಸಿದ ಗ್ರಾಮೀಣ ಮಹಿಳೆಯರದು. ಇವರು ಮನೆ ಮನೆಗಳಿಗೆ ಸ್ವಾತಂತ್ರ್ಯ ಚಳುವಳಿಯನ್ನು ಕೊಂಡೊಯ್ದರು; ತಮ್ಮ ಮನೆಯ ಗಂಡಸರು ಚಳುವಳಿಯಲ್ಲಿ ಭಾಗವಹಿಸಲು ಸಹಕರಿಸಿದರು; ನೈತಿಕ ಬೆಂಬಲ ನೀಡಿದರು; ಅವರು ದಸ್ತಗಿರಿಯಾದರೆ ಅವರ ಸ್ಥಾನ ತುಂಬಲು ತಾವೇ ಪ್ರಯತ್ನಿಸಿದರು. ಅದಕ್ಕಾಗಿ ಚಳುವಳಿಯಲ್ಲಿ ಧರಣಿ ಕೂರುವುದು, ಕರಪತ್ರ ಹಂಚುವುದು, ಬಂಧನಕ್ಕೊಳಗಾಗುವುದು, ಪೋಲೀಸರ ದೌರ್ಜನ್ಯವನ್ನು ಸಹಿಸುವುದು, ಬ್ರಿಟಿಷ್ ಅಧಿಕಾರಿಗಳ, ಪೋಲೀಸರ ದುರ್ವರ್ತನೆಗಳನ್ನು ಪ್ರತಿಭಟಿಸುವುದು, ಕಾನೂನನ್ನು ಮುರಿಯುವ ಮೂಲಕ ವಿದೇಶೀ ಸರಕಾರಕ್ಕೆ ಅಸಹಕಾರ ನೀಡುವುದು, ಆ ಮೂಲಕ ಸರಕಾರದ ಬೇರು ಅಲ್ಲಾಡಿಸುವ ಪ್ರಯತ್ನ ಮಾಡುವುದು ಮುಂತಾದವುಗಳಲ್ಲಿ ಪಾಲ್ಗೊಂಡುದಲ್ಲದೆ ತಮ್ಮ ತಾಳ್ಮೆ, ಕೆಚ್ಚು, ಉತ್ಸಾಹಗಳಿಂದ ತಮ್ಮ ದೇಶ ಪ್ರೇಮವನ್ನು, ಸ್ತ್ರೀಶಕ್ತಿಯನ್ನು ಮೆರೆದರು. ಸ್ವಾತಂತ್ರ್ಯಾ ನಂತರದಲ್ಲಿ ಅವರು ಸಂಪೂರ್ಣವಾಗಿ ತೆರೆಮರೆಗೆ ಸರಿದುದಲ್ಲದೆ ಮುಂದಿನ ಪೀಳಿಗೆಯ ನೆನಪಿನಲ್ಲೂ ಉಳಿಯದಂತೆ ಕತ್ತಲೆಯಲ್ಲಿ ಲೀನರಾದರು. ಆದರೆ ಇವರು ತಮ್ಮ ತ್ಯಾಗ, ಧೈರ್ಯ, ಕಷ್ಟಸಹಿಷ್ಣುತೆ, ಸಮರ್ಪಣಾ ಮನೋಭಾವ, ದೇಶಪ್ರೇಮ ಗಳಿಗಾಗಿ ಇಂದಿಗೂ ಆದರ್ಶಪ್ರಾಯರು, ಸ್ಮರಣೀಯರು. ಇಂಥವರಲ್ಲಿ ಕೆಲವರನ್ನು ಕೆಲವು ಘಟನೆಗಳ ಮೂಲಕ ಪರಿಚಯಿಸುವ ಒಂದು ಸಣ್ಣ ಪ್ರಯತ್ನವೇ ಇದಾಗಿದೆ.

* * *

ಬ್ರಿಟಿಷರನ್ನು ಭಾರತದಿಂದ ತೊಲಗಿಸಲು ಮಹಾತ್ಮಾ ಗಾಂಧೀಜಿಯವರು ಹಾಕಿಕೊಂಡ ಹಲವು ಮುಖ್ಯ ಕಾರ್ಯಯೋಜನೆಗಳಲ್ಲಿ ಅಸಹಕಾರ ಚಳುವಳಿಯೂ ಒಂದು. ಅಹಿಂಸಾತ್ಮಕವಾದ ತೆರಿಗೆ ನಿರಾಕರಣೆ ಚಳುವಳಿ ಒಂದು ಶಕ್ತಿಯುತ ಚಳುವಳಿಯಾಗಿ ಬ್ರಿಟಿಷರ ನೆಲೆಯನ್ನು ಅಭದ್ರಗೊಳಿಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿತು. ಕರ ನಿರಾಕರಣೆ ಚಳುವಳಿಯಲ್ಲಿ ಯಾರಾದರೂ ಭಾಗವಹಿಸು ವುದೆಂದರೆ ಕುಟುಂಬಕ್ಕೆ ಆಧಾರವಾದ ತಮ್ಮೆಲ್ಲಾ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳಲು, ಕಷ್ಟನಷ್ಟಗಳನ್ನು, ನೋವು-ಅಪಮಾನಗಳನ್ನು ಸಹಿಸಲು, ಪೋಲೀಸರ ಅಮಾನುಷ ಹಿಂಸೆಗೆ ಗುರಿಯಾಗಲು ಸಿದ್ಧವಾಗುವುದು ಎಂದಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಪುರುಷರಿಗೆ ಬೆಂಬಲ ನೀಡುವುದು ಮಾತ್ರವೇ ಅಲ್ಲ, ಪುರುಷರಿಗೆ ಸರಿಸಮವಾಗಿ, ಯಾವ ಹಂತದಲ್ಲೂ ಎದೆಗುಂದದೆ ಧೈರ್ಯೋತ್ಸಾಹಗಳಿಂದ ಮುನ್ನುಗ್ಗಿ ಹೋರಾಡಿದ ಮಹಿಳೆಯರ

ಉದಾಹರಣೆಗಳು ಕರ್ನಾಟಕದ ವಿವಿಧ ಕಡೆಗಳಲ್ಲಿ ಅದರಲ್ಲೂ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕಂಡುಬರುತ್ತದ.

ಉಪ್ಪಿನ ಸತ್ಯಾಗ್ರಹ

1931ರ ಏಪ್ರಿಲ್ 6ರಂದು ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿದ ಸಂದರ್ಭ. ಕರ್ನಾಟಕದಲ್ಲೂ ಉಪ್ಪಿನ ಸತ್ಯಾಗ್ರಹವನ್ನು ನಡೆಸಲು ಸತ್ಯಾಗ್ರಹ ಸಮಿತಿ ತೀರ್ಮಾನಿಸಿ ಅದಕ್ಕಾಗಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲ ವನ್ನು ಆರಿಸಲಾಯಿತು. 13ರಂದು ನಡೆಯಲಿದ್ದ ಈ ಸತ್ಯಾಗ್ರಹಕ್ಕೆ ಹುಬ್ಬಳ್ಳಿ, ಬೆಳಗಾವಿ, ಮಂಗಳೂರು, ಸಿದ್ದಾಪುರ, ಸಿರಸಿ, ಹೊನ್ನಾವರ, ಕುಮಟಾ ತಾಲ್ಲೂಕುಗಳಿಂದ ಸತ್ಯಾಗ್ರಹಿಗಳು ಪಾದಯಾತ್ರೆ ಆರಂಭಿಸಿದರು. ಇದನ್ನು ತಡೆಯಲು ಪೋಲೀಸರೂ ಸಿದ್ಧತೆಗಳನ್ನು ನಡೆಸಿದ್ದರು. ಈ ಸಂದರ್ಭದಲ್ಲಿ ಸತ್ಯಾಗ್ರಹಿಗಳಿಗೆ ಆಶ್ರಯ ನೀಡಿದ ಹಲವರಲ್ಲಿ ದತ್ತಾಬಾಯಿ ನಾರ್ವೇಕರ್ ಹೆಸರೂ ಒಂದು. ದೊಡ್ಡದಾದ ಇವಳ ಮನೆ ಸತ್ಯಾಗ್ರಹಿಗಳು ಶಿಬಿರ-ಕಛೇರಿಯಾಗಿ ಪರಿವರ್ತನೆಗೊಂಡಿತ್ತು.

ಏಪ್ರಿಲ್16ರ ಹೊತ್ತಿಗೆ ಸರಕಾರ ಸತ್ಯಾಗ್ರಹದ ನಾಯಕರೆಲ್ಲರನ್ನೂ ಬಂಧಿಸುವ ಕೆಲಸದಲ್ಲಿ ನಿರತವಾಗಿತ್ತು. ಅಂಕೋಲದ ಶಿಬಿರವನ್ನು ತೆರವು ಮಾಡಲು ಆಜ್ಞಾಪಿಸಿತ್ತು. ಸತ್ಯಾಗ್ರಹಿಗಳು ಹಲವು ಗ್ರಾಮಗಳಿಂದ ಬಂದು ಸೇರಿದ್ದರು. ಅಲ್ಲಿಯ ತಾಲ್ಲೂಕು ಕಛೇರಿಯ ಮುಂದೆ ಉಪ್ಪು ತಯಾರಿಸಲು ನಿಶ್ಚಯಿಸಿದ್ದರು. ಮಹಿಳೆಯರು ತಮ್ಮ ಹಸುಗೂಸುಗಳನ್ನು ಹೆಗಲು-ಸೊಂಟಗಳಿಗೇರಿಸಿಕೊಂಡು ದೂರದೂರಿಂದ ಬಿಸಿಲಲ್ಲಿ ನಡೆದು ಬರುತ್ತಿದ್ದುದು ಒಂದು ಅಪರೂಪದ ದೃಶ್ಯವಾಗಿತ್ತು. ಶ್ಯಾಮರಾಯ ಶೆಣ್ಯೆಯವರ ಸೋದರಿ ಸೀತಾಬಾಯಿ ಸರಾಫ ಸತ್ಯಾಗ್ರಹಿಗಳನ್ನುದ್ದೇಶಿಸಿ ಮಾತನಾಡಿದಳು :

"ತೆರಿಗೆ ನೀಡಿದ ಉಪ್ಪನ್ನು ನಾವ್ಯಾರೂ ತಿನ್ನಬಾರದು. ಉಪ್ಪಿನ ಸತ್ಯಾಗ್ರಹವೆಂದರೆ ನಮ್ಮ ಮೇಲೆ ಹೇರಿದ ಪರೋಕ್ಷ ತೆರಿಗೆಯ ನಿರಾಕರಣೆ. ತೆರಿಗೆ ನೀಡದ, ನಾವೇ ತಯಾರಿಸಿದ ಉಪ್ಪನ್ನು ತಿನ್ನೋಣ. ಆ ಮೂಲಕ ಸ್ವಾತಂತ್ರ್ಯವನ್ನು ಅನುಭವಿಸೋಣ".

ಆನಂದಿಬಾಯಿ ಹನುಮಟ್ಟಿಕರರು ಕೂಡ ಸಭೆಯನ್ನುದ್ದೇಶಿಸಿ ಮಾತನಾಡಿದರು. ಉಪ್ಪಿನ ಸತ್ಯಾಗ್ರಹ ತಮ್ಮ ಪವಿತ್ರ ಕರ್ತವ್ಯ ಎಂದು ಒತ್ತಿ ಹೇಳಿದರು. ಪುರುಷರು ಮತ್ತು ಮಹಿಳೆಯರು ಸೇರಿ ತಯಾರಿಸಿದ ಇಪ್ಪತ್ತು ಗುಡ್ಡೆ ಉಪ್ಪು ಕ್ಷಣಾರ್ಧದಲ್ಲಿ ಮಾರಾಟವಾಯಿತು. ಹೀಗೆ ಉಪ್ಪಿನ ಸತ್ಯಾಗ್ರಹ ಕರ್ನಾಟಕದಲ್ಲಿ ಯಶಸ್ವಿಯಾಯಿತು.

ಸ್ವದೇಶೀ ಚಳುವಳಿ

ಅಂದು 1930ರ ಮೇ 17, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹುಬ್ಬಳ್ಳಿಯಲ್ಲಿ ಸಭೆ ಸೇರಿ, ಸಾರಾಯಿ ನಿಷೇಧ ಪ್ರಚಾರ, ಸಾರಾಯಿ ಅಂಗಡಿಗಳ ಘೇರಾವ್, ವಿದೇಶೀ ವಸ್ತುಗಳ ಬಹಿಷ್ಕಾರ ಮುಂತಾದ ಕಾರ್ಯಕ್ರಮಗಳನ್ನು ಕರ್ನಾಟಕದಲ್ಲಿ ಹಮ್ಮಿಕೊಳ್ಳುವ ನಿರ್ಣಯವನ್ನು ಕೈಗೊಂಡಿತು.

ಸಾರಾಯಿ ನಿಷೇಧ ಮತ್ತು ವಿದೇಶೀ ಬಟ್ಟೆಗಳ ಬಹಿಷ್ಕಾರ ಕರ್ನಾಟಕದಲ್ಲಿ ಆರಂಭಗೊಂಡಿತು. ಅಂಕೋಲದ ಶ್ಯಾಮರಾವ್ ಶೆಣ್ಯೆಯವರ ಪತ್ನಿ ಯಶೋಧ ವಿದೇಶೀ ಬಟ್ಟೆಗಳ ಬಹಿಷ್ಕಾರ ಚಳುವಳಿಯ ನೇತೃತ್ವವನ್ನು ವಹಿಸಿಕೊಂಡರು. ಇವರ ನೇತೃತ್ವದಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿದರು. ಮನೆಮನೆಗೆ ಹೋಗಿ ವಿದೇಶೀ ಬಟ್ಟೆಗಳನ್ನು ಸಂಗ್ರಹಿಸಿದರು. ಹೀಗೆ ಸಂಗ್ರಹಿಸಿದ ಬಟ್ಟೆಗಳನ್ನು ಸುಟ್ಟರು. ಬಟ್ಟೆ ವ್ಯಾಪಾರಿಗಳನ್ನು ವಿದೇಶಿ ಬಟ್ಟೆಗಳನ್ನು ಮಾರದಂತೆ ಕೇಳಿಕೊಂಡರು. ಇವರ ಮನವಿಗೆ ಮನ್ನಣೆ ನೀಡಿದ ವ್ಯಾಪಾರಿಗಳು ತಾವೆಂದೂ ವಿದೇಶೀ ಬಟ್ಟೆಗಳ ಮಾರಾಟ ಮಾಡುವುದಿಲ್ಲವೆನ್ನುವ ಕರಾರು ಪತ್ರಕ್ಕೆ ಸಹಿ ಹಾಕಿದರು. ಹೊರ ದೇಶದಲ್ಲಿ ತಯಾರಾದ ಬಳೆಗಳನ್ನು ಮಹಿಳೆಯರು ಧರಿಸುವ ಕಾಲ ಅದಾಗಿತ್ತು. ಭಾಗೀರಥಿಬಾಯಿ ಎಂಬ ಮಹಿಳೆ ಒಂದು ವಿಶಿಷ್ಟ ರೀತಿಯಲ್ಲಿ ಸ್ವದೇಶೀ ಚಳುವಳಿಯನ್ನು ಹುಟ್ಟುಹಾಕಿದಳು. ಅವಳು ಸ್ವದೇಶದಲ್ಲಿ ತಯಾರಾದ ಬಳೆಗಳನ್ನು ಮುಂಡಿಗೆ ಸರದ ಹಳ್ಳಿಗಳಲ್ಲಿ ಹಾಗೂ ಸತ್ಯಾಗ್ರಹದ ಪ್ರಮುಖ ಕೇಂದ್ರಗಳಾದ ಹೆಗ್ಗೆಕಟ್ಟೆ, ಸುಗವಿ, ಬನವಾಸಿ ಮುಂತಾದ ಕಡೆಗಳಲ್ಲಿ 'ದೇಶೀ ಬಳೆ'ಗಳನ್ನು ಮಾರಿ ತನ್ನ ದೇಶಪ್ರೇಮವನ್ನು ಮೆರೆದಳು.

ಅರಣ್ಯ ಸತ್ಯಾಗ್ರಹ

ಆಗ ಜೂನ್ ತಿಂಗಳ ಮಳೆಗಾಲ. ಅರಣ್ಯ ಸತ್ಯಾಗ್ರಹವನ್ನು ಆರಂಭಿಸಲು ನಿರ್ಧರಿಸಲಾಗಿತ್ತು. ಈ ಸಂದರ್ಭವನ್ನು ತಮ್ಮ ದೇಶಪ್ರೇಮದ ಅಭಿವ್ಯಕ್ತಿಗೆ ಸಿಕ್ಕ ಒಂದು ಸುವರ್ಣಾವಕಾಶವೆಂದು ಅಲ್ಲಿಯ ಜನ ಭಾವಿಸಿ ಮನೆಗೊಬ್ಬರಂತೆ ಭಾಗವಹಿಸಲು ನಿರ್ಧರಿಸಿದರು. ಇವರಲ್ಲಿ ಮಹಿಳೆಯರೂ ಇದ್ದರು. ಮನೆಗೊಬ್ಬ ಪ್ರತಿನಿಧಿಯಂತೆ ಮೆರವಣಿಗೆಯಲ್ಲಿ ಹೊರಟ ಅವರಿಗೆ ಮಹಿಳೆಯರಿಂದ ಸಂಪೂರ್ಣ ಸಹಕಾರ, ಆರತಿ ಬೆಳಗಿ ಹಣೆಗೆ ಕುಂಕುಮವಿಟ್ಟು 'ಜಯಶೀಲರಾಗಿ ಬನ್ನಿ' ಎಂದು ಶುಭ ಹಾರೈಸುವ ಹುರುಪು.

ಅಂಕೋಲಾ ತಾಲ್ಲೂಕಿನಲ್ಲೂ ಮಹಿಳೆಯರು ಹಿಂದೆ ಬೀಳಲಿಲ್ಲ. ಮುಕ್ಕುಂಬಿಯ ಶ್ಯಾಮಭಟ್ಟ ಬಿಸಲಕೊಪ್ಪರವರನ್ನು ಸತ್ಯಾಗ್ರಹದಲ್ಲಿ ಭಾಗವಹಿಸುವ ಮೊದಲೇ ಪೋಲೀಸರು ಬಂಧಿಸಿದಾಗ ಅವರ ಪತ್ನಿ ಸುಮ್ಮನಾಗಲಿಲ್ಲ. ತಾನೇ ಮರವನ್ನು ಕಡಿದು ಅರಣ್ಯ ಸತ್ಯಾಗ್ರಹ ನಡೆಸಿದಳು. ಸ್ವತಃ ಪೋಲೀಸರ ಬಳಿ ಬಂದು, ನಾನು ಕಾನೂನನ್ನು ಉಲ್ಲಂಘಿಸಿದ್ದೇನೆ. ನನ್ನನ್ನು ಬಂಧಿಸಿ' ಎಂದು ಕೇಳಿಕೊಂಡಳು. ಆದರೆ ಪೋಲೀಸರು ಬಂಧಿಸಲಿಲ್ಲ. ಅದೇ ದಿನ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ಅವಳು, 'ನಾನು ಕಾನೂನನ್ನು ಉಲ್ಲಂಘಿಸಿದ್ದರೂ ನನ್ನನ್ನು ಬಂಧಿಸದೆ ಅನ್ಯಾಯ ಮಾಡಿಧ್ಹಾರೆ. ಇನ್ನು ಮುಂದೆ ಮಹಿಳೆಯರೆಲ್ಲರೂ ಕಾನೂನನ್ನು ಉಲ್ಲಂಘಿಸೋಣ' ಎಂದು ಮಹಿಳೆಯರಿಗೆ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಪ್ರಚೋದನೆ ನೀಡಿದಳು. ಅಲ್ಲದೆ ಅವಳು ಅಲ್ಲಿಯ ಪೋಲೀಸು ಅಧಿಕಾರಿಯ ಹಣೆಗೆ ಕುಂಕುಮವಿಟ್ಟು ಅವಮಾನಗೊಳಿಸಿದಳೆಂದು ಹೇಳುತ್ತಾರೆ. ಒಟ್ಟಿನಲ್ಲಿ ಅರಣ್ಯ ಸತ್ಯಾಗ್ರಹ ಜನತೆಯಲ್ಲಿ ಅದರಲ್ಲೂ ಮಹಿಳೆಯರಲ್ಲಿ ಒಂದು ವಿಶಿಷ್ಟವಾದ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿತ್ತೆನ್ನಬಹುದು.

ಕರಾ ನಿರಾಕರಣೆ ಚಳುವಳಿ

ಕರ ನಿರಾಕರಣೆ ಸತ್ಯಾಗ್ರಹದ ಸಂದರ್ಭದಲ್ಲಿ ಅಂಕೋಲದಲ್ಲಿ ನಡೆದ ಒಂದು ಪ್ರಸಂಗ ತುಂಬಾ ಕುತೂಹಲಕರ. ಅಂಕೋಲಾ ಕಂದಾಯ ಅಧಿಕಾರಿಯೊಬ್ಬರು ಶಿಂಗನಮಕ್ಕಿ ಎಂಬ ಹಳ್ಳಿಗೆ ಕಂದಾಯ ವಸೂಲಿಗಾಗಿ ತಮ್ಮ ಸಿಬ್ಬಂದಿಗಳೊಡನೆ ಹೊರಟರು. ಅಲ್ಲಿ ಇವರಿಗೆ ಕಂದಾಯವೇಕೆ, ಕುಡಿಯಲು ನೀರೂ ಸಿಗದ ಪರಿಸ್ಥಿತಿ ಉಂಟಾಯಿತು. ಹಳ್ಳಿಯವರೆಲ್ಲಾ ಅವರಿಗೆ ಊಟ, ನೀರು, ಏನನ್ನೂ ಕೊಡಬಾರದೆಂದು ನಿರ್ಧರಿಸಿದ್ದರು. ತಾವೇ ಟೀ ತಯಾರಿಸಿಕೊಳ್ಳಲು ಪಾತ್ರೆ ಕೇಳಿದರೆ ಸಿಗಲಿಲ್ಲ. ಪೋಲೀಸು ಪೇದೆಯೊಬ್ಬ ರೈತ ಮಹಿಳೆಯೊಬ್ಬಳನ್ನು ಕಬ್ಬು ಕೊಡುವಂತೆ ಕೇಳಿದ. ಅವಳು ಕೊಡಲಿಲ್ಲ. ಟೀಗೆ ಸಕ್ಕರೆ ಕೇಳಿದರೆ ಅಂಗಡಿಯವ 'ಇಲ್ಲ'ವೆಂದ. ರಾತ್ರಿಯಲ್ಲಿ ತಂಗಲು ಜಾಗ ಕೊಟ್ಟ ಉಪಾಧ್ಯಾಯನೊಬ್ಬ ಹಳ್ಳಿಯಿಂದ ಬಹಿಷ್ಕೃತನಾದ. ಬಾಯಾರಿದ ಅಧಿಕಾರಿಗಳು ಬಾವಿಯಿಂದ ನೀರು ಸೇದಲು ಬಿಂದಿಗೆಗಾಗಿ ಹುಡುಕಿದರು. ಅದೇ ಸಮಯದಲ್ಲಿ ಮನೆಯೊಂದರ ಮುಂದೆ ಬಿದ್ದಿದ್ದ ಬಿಂದಿಗೆಯೊಂದು ಕಣ್ಣಿಗೆ ಬಿತ್ತು. ಅದನ್ನೆತ್ತಿಕೊಂಡ ಅಧಿಕಾರಿಗಳು ಬಾವಿಯ ಬಳಿ ನೀರು ಸೇದಲು ಹೋದರು. ಅಷ್ಟರಲ್ಲಿ ಅಲ್ಲಿಗೆ ಬಂದ ಮನೆಯೊಡತಿ, ಬಿಂದಿಗೆಯನ್ನು 'ಕದ್ದ' ಪೋಲೀಸರನ್ನು ಬಾಯಿಗೆ ಬಂದಂತೆ ಬೈದು ಬಿಂದಿಗೆಯನ್ನು ಕಸಿದುಕೊಂಡು ಹೊರಟೇ ಹೋದಳು!

"ನಾವು ಗಾಂಧೀಜಿಯವರ ಸೂಚನೆಯಂತೆ ಕರ ನಿರಾಕರಣೆ ಚಳುವಳಿಯನ್ನು ಆರಂಭಿಸಿದ್ದೇವೆ. ನೀನು ಮಹಾತ್ಮರಷ್ಟು ತಿಳುವಳಿಕೆಯುಳ್ಳವನೇನಲ್ಲ. ಒಂದು ಉದ್ಯೋಗಕ್ಕಾಗಿ ಸ್ವಾತಂತ್ರ್ಯ ಸಾಧನೆಗೆ ಅಡ್ಡ ಬರಬೇಡ. ಸ್ವರ್ಗದಿಂದ ವಂಚಿತನಾಗಬೇಡ. ನಿನ್ನ ಉದ್ಯೋಗವನ್ನು ಬಿಟ್ಟು ಕರಾ ನಿರಾಕರಣೆಯ ಚಳುವಳಿಯಲ್ಲಿ ಸೇರಿಕೊ" ಎಂದು ಹೇಳಿದವಳು ತಿಪ್ಪಹಮಣ್ಣ ನಾಯಕನ ಹೆಂಡತಿ. ಅದುವರೆಗೆ ತೆರಿಗೆ ನೀಡುವಂತೆ ಬೋಧಿಸುತ್ತಿದ್ದ ಅಧಿಕಾರಿ ಮೇಲಿನ ಮಾತುಗಳನ್ನು ಕೇಳಿದ ನಂತರ 1931ರ ಮಾರ್ಚಿ ತಿಂಗಳ 5ರಂದೇ ತೆರಿಗೆ ವಸೂಲಿಯನ್ನು ನಿಲ್ಲಿಸಿಬಿಟ್ಟ!

ಇದೇ ವರ್ಷ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಧಾರವಾಡ ಜಿಲ್ಲೆಯ ಹಿರೇಕೆರೂರಿನಲ್ಲಿ ಅಡಿಕೆ ಮತ್ತು ಬತ್ತದ ಬೆಳೆ ಕೀಟಗಳ ಹಾವಳಿ ಹಾಗೂ ಅಕಾಲಿಕ ಮಳೆಯಿಂದಾಗಿ ಹಾಳಾಗಿದ್ದವು. ಜನರು ತೆರಿಗೆ ಕೊಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಅಧಿಕಾರಿಗಳು ಇವರ ಬಗ್ಗೆ ಸಹಾನುಭೂತಿ ತೋರುವ ಬದಲು ದಮನಕಾರೀ ನೀತಿಯನ್ನು ಅನುಸರಿಸಿದರು. ತೆರಿಗೆ ಕೊಡದ ರೈತರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳ ತೊಡಗಿದರು. ಅವುಗಳನ್ನು ಹರಾಜು ಹಾಕಿ ಕೊಡಬೇಕಾದ ಕಂದಾಯಕ್ಕೆ ಜಮ ಮಾಡುತ್ತಿದ್ದರು. ಇದನ್ನು ತಡೆಯಲು ಮಹಿಳಾ ಪಡೆಯೊಂದನ್ನು ರಚಿಸಲು ಸತ್ಯಾಗ್ರಹಿಗಳು ನಿರ್ಧರಿಸಿದರು. ದೊಡ್ಡಮನೆಯ ಮಹದೇವಿಯಮ್ಮ, ಕಾವೇರಮ್ಮ ಮತ್ತಿತರರು 'ಮಹಿಳಾ ಸ್ವಯಂಸೇವಕರ ಪಡೆಯೊಂದನ್ನು ರಚಿಸಲು ಮುಂದಾದರು. ಹರಾಜಿನಲ್ಲಿ ಮಾರುವ ವಸ್ತುಗಳನ್ನು ಸತ್ಯಾಗ್ರಹ ವಿರೋಧಿಗಳು ಕೊಳ್ಳುತ್ತಿದ್ದರು. ಇಂಥವರ ಮನೆ ಮುಂದೆ ಮಹಿಳೆಯರು 'ಪ್ರತಿಭಟನೆ', ಧರಣೆ ಮುಂತಾದ ಕ್ರಮಗಳಿಂದ ಅವರ ಮನಃಪರಿವರ್ತನೆಗೆ ಪ್ರಯತ್ನಿಸಬೇಕಾಗಿತ್ತಲ್ಲದೆ ಹರಾಜಿನಲ್ಲಿ ಕೊಂಡ ವಸ್ತುಗಳನ್ನು ಮರಳಿ ಪಡೆಯಬೇಕಾಗಿತ್ತು.

ಇದುವರೆಗೆ ಮೆರವಣಿಗೆಗಳಲ್ಲಿ, ಸಭೆಗಳಲ್ಲಿ ಭಾಗವಹಿಸುವುದು ಮಾತ್ರ ತಿಳಿದಿದ್ದ ಮಹಿಳೆಯರು ಯಾರದೋ ಮನೆಯ ಮುಂದೆ ಧರಣೆ ಕೂರುವುದು, ಉಪವಾಸ ಮಾಡುವುದು ಮುಂತಾದವಕ್ಕೆ ಹಿಂಜರಿಕೆ ತೋರುವುದು ಸಹಜವಾಗಿತ್ತು. ಆಗ ವೆಂಕಟರಾಮಯ್ಯನವರ ಪತ್ನಿ ಗೌರಮ್ಮ ಇದಕ್ಕೆ ಮುಂದಾದರು. ಇವರೊಂದಿಗೆ ದೊಡ್ಡಮನೆ ಮಹದೇವಿಯಮ್ಮ, ಕಲ್ಲಾಳಿನ

ಲಕ್ಷಮ್ಮ ಮತ್ತು ಕಾವೇರಮ್ಮ, ಹಣಜೀಬೈಲಿನ ದುಗ್ಗಮ್ಮ, ತ್ಯಾಗ್ಲಿ ಭುವನೇಶ್ವರಮ್ಮ ಮೊದಲಾದವರು ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಹೀಗೆ ಕರ ನಿರಾಕರಣೆಯಲ್ಲಿ ಮಹಿಳೆಯರು ವಹಿಸಿದ ಮಹತ್ವದ ಪಾತ್ರಕ್ಕೆ ಸರಿಸಾಟಿಯಾಗುವ ಯಾವುದೇ ಉದಾಹರಣೆ ಇತಿಹಾಸದಲ್ಲಿ ಇಲ್ಲ ಎನ್ನುವುದು ಕೆಲವರ ಅಭಿಪ್ರಾಯ. ಇದು ನಿಜವೆನ್ನುವಂತೆ ಕೆಲವು ಘಟನೆಗಳು ಮೈನವಿರೇಳಿಸುತ್ತವೆ.

ಮೊದಲ ಸತ್ಯಾಗ್ರಹಿಯಾದ ಗೌರಮ್ಮ ಸೊರಬ ತಾಲ್ಲೂಕಿನ ಹೆಚ್ಚೆಹಳ್ಳಿಯ ರಾಮಪ್ಪ ಪಟೇಲರ ಮನೆ ಮುಂದೆ ಸತ್ಯಾಗ್ರಹ ಕುಳಿತರು. ಇವರೊಂದಿಗೆ ಕಾವೇರಮ್ಮ ಮತ್ತು ಲಕ್ಷಮ್ಮನೂ ಇದ್ದರು. ಇದು ನಡೆದದ್ದು 1932ರ ಮಾರ್ಚ್ 29ರಂದು. ಪಟೇಲರು ಕಡಿಮೆ ಬೆಲೆಗೆ ಎಮ್ಮೆಗಳನ್ನು ಹರಾಜಿನಲ್ಲಿ ಕೊಂಡಿದ್ದರು. ಈ ಎಮ್ಮೆಗಳನ್ನು ಅವುಗಳ ವಾರಸುದಾರರಿಗೆ ಹಿಂದಿರುಗಿಸುವಂತೆ ಮಹಿಳೆಯರು ಮಾಡಿದ ಒತ್ತಾಯಕ್ಕೆ ಪಟೇಲರು ಮಣಿಯಲಿಲ್ಲ. ದೇವರ ಪ್ರಾರ್ಥನೆ ಮಾಡಿ ನೀರನ್ನು ಗುಟುಕರಿಸಿದ ಮಹಿಳೆಯರು ಸತ್ಯಾಗ್ರಹ ಆರಂಭಿಸಿದರು. ಯಾವ ಆಹಾರವನ್ನೂ ಮುಟ್ಟದೆ ಮೂರು ದಿನಗಳು ಕಳೆದವು, ದಿನಾಂಕ 31ರಂದು ಗೌರಮ್ಮನ ಸ್ಥಿತಿ ಹದಗೆಟ್ಟಿತು. ಆದರೆ ಪಟೇಲರು ತಮ್ಮ ಪಟ್ಟು ಬಿಡಲಿಲ್ಲ.

ಪತ್ನಿಯ ಅನಾರೋಗ್ಯದ ಸುದ್ದಿ ತಿಳಿದರೂ ವೆಂಕಟ ರಾಮಯ್ಯನವರು ಸಿದ್ದಾಪುರದಲ್ಲಿ ನಡೆಯಲಿದ್ದ ಸಭೆಯಲ್ಲಿ ಭಾಗವಹಿಸಬೇಕಾಗಿತ್ತು. 'ಒಂದು ವೇಳೆ ಗೌರಮ್ಮ ಸತ್ತು ಹೋದರೆ? ತನ್ನ ಎರಡು ಮಕ್ಕಳ ಗತಿ' ಹೀಗೆ ಯೋಚಿಸಿ ಒಮ್ಮೆ ನಡುಗಿದರೂ, ಸತ್ಯಾಗ್ರಹವನ್ನು ನಿಲ್ಲಿಸುವಂತೆ ಹೇಳುವುದು ಇಡೀ ಕಾರ್ಯಯೋಜನೆಗೆ ಕೊಡುವ ಪೆಟ್ಟಾಗಿತ್ತು.

ಕೆಟ್ಟ ಸುದ್ದಿಯ ನಿರೀಕ್ಷೆಯಲ್ಲಿ ಸಿದ್ದಾಪುರದಿಂದ ಹಿಂದಿರುಗಿ ಬಂದ ವೆಂಕಟರಾಮಯ್ಯನವರಿಗೆ ಅನಿರೀಕ್ಷಿತ ಸುದ್ದಿಯೆಂದರೆ, ಹಿಂದಿನ ರಾತ್ರಿಯೇ ಪಟೇಲರು ಎಮ್ಮೆಗಳನ್ನು ಹಿಂದಿರುಗಿಸಲು ಒಪ್ಪಿದ್ದರೆಂದು ಆದರೆ ಎಮ್ಮೆಗಳನ್ನು ವಾಪಸು ಮಾಡಲು ಒಪ್ಪಿದ್ದರೂ ಅವುಗಳನ್ನು ಕುರಿತ ದಾಖಲೆ ಕೊಡಲು ನಿರಾಕರಿಸಿದ್ದರಿಂದಾಗಿ ಗೌರಮ್ಮ ಸತ್ಯಾಗ್ರಹ ಮುರಿದಿರಲಿಲ್ಲ. ಇದರಿಂದಾಗಿ ಕೊನೆಗೆ ರಾಮಪ್ಪ ಪಟೇಲರು ಎಮ್ಮೆಗಳನ್ನಷ್ಟೇ ಅಲ್ಲ, ಹರಾಜಿನಲ್ಲಿ ಕೊಂಡಿದ್ದ ಪಾತ್ರೆಗಳೆಲ್ಲವನ್ನೂ ಕೊಡಲು ಒಪ್ಪಿದರು. ಅವುಗಳನ್ನು ತೊಳೆದು, ಕುಂಕುಮವಿಟ್ಟು ದಾನಪತ್ರದೊಂದಿಗೆ ಕೊಟ್ಟ ಮೇಲೇ ಗೌರಮ್ಮ ಮತ್ತು ಸಂಗಡಿಗರು ಹಣ್ಣಿನ ರಸ ಕುಡಿದು ಉಪವಾಸವನ್ನು ಮುರಿದರು; ತಮ್ಮ ಮೊಟ್ಟಮೊದಲ ಪ್ರಯತ್ನದಲ್ಲಿ ಜಯಶೀಲರಾದರು.

ಹೆಚ್ಚೆಹಳ್ಳಿಯಲ್ಲಿ ತಮಗೆ ದೊರೆತ ಜಯದಿಂದ ಮಹಿಳೆಯರಲ್ಲಿ ಹೊಸ ಹುರುಪು ಮೂಡಿ ಇಮ್ಮಡಿಸಿದರೆ ಹರಾಜಿನಲ್ಲಿ ವಸ್ತುಗಳನ್ನು ಕೊಂಡಿದ್ದವರು ದಿಗ್ಭ್ರಾಂತರಾದರು. ಒಬ್ಬರಾದ ಮೇಲೊಬ್ಬರಂತೆ ಸತ್ಯಾಗ್ರಹಿಗಳ ಒತ್ತಡಕ್ಕೆ ಮಣಿದು ಕೊಂಡಿದ್ದ ವಸ್ತುಗಳನ್ನು ಹಿಂದಿರುಗಿಸಿದರು.

ಹರಾಜಿನಲ್ಲಿ ಕೊಂಡ ವಸ್ತುಗಳನ್ನು ಮರಳಿ ಪಡೆಯುವಲ್ಲಿ ತಮ್ಮ ಅತಿಯಾದ ಹಠಮಾರಿತನವನ್ನು ಪ್ರದರ್ಶಿಸಿದ ಮಹಿಳೆಯರು ಕೆಲವೊಮ್ಮೆ ಹೀಗೆ ಕೊಂಡವರ ಬಗ್ಗೆ ಉದಾರವಾಗಿ ವರ್ತಿಸಿದ ಉದಾಹರಣೆಗಳೂ ಉಂಟು. ಅಂಥ ಒಂದು ಪ್ರಸಂಗ ಅಕ್ಕುಂಜೆಯಲ್ಲಿ ನಡೆಯಿತು. ಇಲ್ಲಿಯ ಇಬ್ಬರು ಗೌಡರು ಹರಾಜಿನಲ್ಲಿ ಎರಡು ಎಮ್ಮೆಗಳನ್ನು ಕೊಂಡಿದ್ದರು. ಇದನ್ನು ತಿಳಿದ ಗೌರಮ್ಮ, ಕಾವೇರಮ್ಮ ಮತ್ತು ಶಿರಾಳ್ಗಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಭಾಗೀರಥಮ್ಮ ಮತ್ತು ದುಗ್ಗಮ್ಮ ಬೊಮ್ಮೇಗೌಡರ ಮನೆ ಮುಂದೆ ಧರಣಿ ಆರಂಭಿಸಿದರು. ಬೊಮ್ಮೇಗೌಡ ತನ್ನ ತಪ್ಪನ್ನು ಒಪ್ಪಿಕೊಂಡು ಎಮ್ಮೆಗಳನ್ನು ಹಿಂದಿರುಗಿಸಿದ. ಅವನು ಬಡವ ಎಂದು ತಿಳಿದ ಸತ್ಯಾಗ್ರಹಿಗಳ ಮನ ಕರಗಿತು. ಎಮ್ಮೆಗಳನ್ನು ಕೊಳ್ಳಲು ನೀಡಿದ್ದ ಹಣವನ್ನು ತುಂಬಿಕೊಡುವಂತೆ ಕಾಂಗ್ರೆಸ್ಸಿಗೆ ಮನವಿ ಮಾಡಿಕೊಳ್ಳುವ ಸಲಹೆಯನ್ನು ಅವರೇ ನೀಡಿದರು! ಆದರೆ ಅವನು ಹಾಗೆ ಮಾಡಲಿಲ್ಲವೆನ್ನುವುದು ಬೇರೆ ಮಾತು. ಪೋಲೀಸರ ಒತ್ತಾಯ, ಬೆದರಿಕೆಗಳಿಗೂ ಬಡಪೆಟ್ಟಿಗೆ ಜಗ್ಗಲಿಲ್ಲ. ತಾನು ಅವುಗಳನ್ನು ಮಹಾತ್ಮಾ ಗಾಂಧೀಜಿಗೆ ದಾನವಾಗಿ ಕೊಟ್ಟಿದ್ದೇನೆಂದು ತಿಳಿಸಿದನಂತೆ!

ಆದರೆ ಇದೇ ಹಳ್ಳಿಯ ಮಹದೇವಪ್ಪಗೌಡ ಸತ್ಯಾಗ್ರಹಿಗಳನ್ನು ತನ್ನ ಮನೆ ಬಾಗಿಲಿನಲ್ಲೂ ನಿರೀಕ್ಷಿಸಿ ತಾನು ಕೊಂಡಿದ್ದ ಎಮ್ಮೆಯನ್ನು ಗುಟ್ಟಾಗಿ ಬೇರೆಯವರಿಗೆ ಮಾರಿದ್ದ. ಸತ್ಯಾಗ್ರಹಿಗಳು ಇಂಥವರ ವಿತಂಡವಾದಗಳ ಮುಂದೆ ಮಣಿಯುವವರಾಗಿರಲಿಲ್ಲ. ಮಹಿಳೆಯರ ಉಪವಾಸ ಸತ್ಯಾಗ್ರಹಕ್ಕೆ ಬೆದರಿದ ಗೌಡ ಪೋಲೀಸರ ನೆರವು ಕೇಳಿದ. ಆಗ ಅಲ್ಲಿಗೆ ಬಂದ ಪೋಲೀಸ್ ಇನ್ಸ್‌ಪೆಕ್ಟರು ಮಹಿಳೆಯರನ್ನು ಹೊಡೆದು ಎತ್ತಿನ ಗಾಡಿನಲ್ಲಿ ಸಿದ್ದಾಪುರಕ್ಕೆ ಕರೆದೊಯ್ದರು. ಘೋಷಣೆಗಳನ್ನು ಕೂಗಿದ ಮಹಿಳೆಯರಿಗೆ ಚೆನ್ನಾಗಿ ಹೊಡೆದು ಮಧ್ಯರಾತ್ರಿಯ ಕಳೆದ ಮೇಲೆ ಗೌರಮ್ಮನವರನ್ನು ಬಿಟ್ಟು ಉಳಿದವರು ಮನೆಗೆ ಹೋಗಲು ಅನುಮತಿ ನೀಡಿದರು. ಆದರೆ ಗೌರಮ್ಮನನ್ನು ಬಿಟ್ಟು ಹೋಗಲು ಯಾರೂ ಸಿದ್ಧರಿರಲಿಲ್ಲ. ಈಗ ಪೋಲೀಸರಿಗೆ ಗೌರಮ್ಮನನ್ನು ಬಿಡುಗಡೆ ಮಾಡುವುದು ಅನಿವಾರ್ಯವಾಯಿತು.

ಮರುದಿನ ಸಹಿ ಮಾಡಲು ಬಂದ ಮಹಿಳೆಯರನ್ನು ಸಂಜೆಯವರೆಗೆ ಠಾಣೆಯಲ್ಲೇ ಉಳಿಸಿಕೊಂಡು ಗೌರಮ್ಮನನ್ನು ಬಿಟ್ಟು ಹೋಗಲು ತಿಳಿಸಿದರು. ಇದಕ್ಕೆ ಒಪ್ಪದ ಸತ್ಯಾಗ್ರಹಿಗಳನ್ನು ಹೊಡೆದು ಬಡಿದರು. ಅಲ್ಲದೆ ಗೌರಮ್ಮನನ್ನು ಜೈಲಿಗೆ ಕಳುಹಿಸಿದ ಪೋಲೀಸರು ಅವರಿಗೆ ದೈಹಿಕ ಹಿಂಸೆಯನ್ನು ನೀಡಿದರು. ಕೊನೆಯ ಅಸ್ತ್ರವಾಗಿ ಗೌರಮ್ಮ ಜೈಲಿನಲ್ಲೇ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಮಹದೇವಪ್ಪಗೌಡ ಎಮ್ಮೆಯನ್ನು ಹಿಂತಿರುಗಿಸುವವರೆಗೆ ತಾವು ಆಹಾರವನ್ನು ಸೇವಿಸುವುದಿಲ್ಲವೆಂದು ಪಟ್ಟುಹಿಡಿದರು. ಪೋಲೀಸರು ಗೌರಮ್ಮನಿಗೆ ನೀಡುತ್ತಿದ್ದ ಹಿಂಸೆ, ಗೌರಮ್ಮ ಉಪವಾಸ ಸತ್ಯಾಗ್ರಹ ಆರಂಭಿಸಿರುವುದು ಇವೆಲ್ಲವನ್ನೂ ತಿಳಿದ ಸಿದ್ದಾಪುರದ ಮಹಿಳೆಯರ ಒಂದುಗುಂಪು ಅಕ್ಕುಂಜೆಯ ಮಹದೇವಪ್ಪಗೌಡನ ಮನೆಯ ಮುಂದೆ ಧರಣಿ ಕುಳಿತಿತ್ತು. ಈಗ ಮಹದೇವಪ್ಪಗೌಡ ಸೋಲಲೇಬೇಕಾಯಿತು; ಕಾರಣ ಅವನ ಮನೆಯ ಮಹಿಳೆಯರೇ ಅವನ ವಿರುದ್ಧ ಧರಣಿ ಕೂತ ಮಹಿಳೆಯರೊಂದಿಗಿದ್ದರು!

ಸತ್ಯಾಗ್ರಹ ಮಹಿಳೆಯರಿಗೆ ಹಲವು ಪಾಠಗಳನ್ನು ಕಲಿಸಿತ್ತು. ಈ ಅವಧಿಯಲ್ಲಿ ಅವರು ಪೋಲೀಸರ ಏಟು ಹಾಗೂ ಅವರ ಅನಾಗರಿಕ ವರ್ತನೆಗಳನ್ನು ಕಂಡಿದ್ದರು. ತಮ್ಮ ಘನತೆ, ಮರ್ಯಾದೆಗಳಿಗೆ ಧಕ್ಕೆ ಬರುವ ಸಂದರ್ಭಗಳನ್ನೂ ನಿರೀಕ್ಷಿಸುವಂತಾಗಿತ್ತು. ಇದಲ್ಲದೆ ಹರಾಜು ನಡೆಯುವ ಸಂದರ್ಭಗಳಲ್ಲೇ ಪಿಕೆಟಿಂಗ್ ಮಾಡುವುದು, ಸತ್ಯಾಗ್ರಹಿಗಳ ಆಸ್ತಿಪಾಸ್ತಿಗಳನ್ನು ಹರಾಜಿನಲ್ಲಿ ಯಾರೂ ಕೊಳ್ಳದಂತೆ ಮಾಡುವುದು, ಹಾಗೆ ಕೊಂಡಂಥವರ ಮನೆ ಮುಂದೆ ಧರಣಿ ಕೂರುವುದೂ ತಮ್ಮ ಕರ್ತವ್ಯವೆಂದು ಬಗೆದಿದ್ದರು. ಈಗ ಅವರಿಗುಳಿದದ್ದು ಒಂದೇ. ಪೋಲೀಸರ ಹೊಡೆತಗಳನ್ನು ಸಹಿಸಿಕೊಳ್ಳುವುದು. ತಮ್ಮ ಮರ್ಯಾದೆಗೆ ಕುಂದುಂಟಾದರೆ ಪೋಲೀಸರು ದೈಹಿಕ ಹಿಂಸೆ, ಮಾನಭಂಗ ಮುಂತಾದ ಹೀನಕೃತ್ಯಕ್ಕಿಳಿದರೆ ಆತ್ಮಹತ್ಯೆ ಮಾಡಿಕೊಳ್ಳುವುದು! ತಮ್ಮ ಪಾತಿವ್ರತ್ಯಕ್ಕೆ ಭಂಗ ಬಂದಲ್ಲಿ ಗಾಂಧೀಜಿಯವರಿಗೆ ಪತ್ರದಲ್ಲಿ ತಿಳಿಸಿ ಸಾಯುವುದು, ಇಂಥ ಪ್ರಮಾಣ ವಚನಕ್ಕೆ ಬದ್ಧರಾದವರು ಮಾತ್ರ ಸತ್ಯಾಗ್ರಹಗಳಲ್ಲಿ ಭಾಗವಹಿಸುವುದೆಂಬ ತೀರ್ಮಾನಕ್ಕೆ ಬಂದರು. ಇಂಥ ನಿರ್ಧಾರಕ್ಕೆ ಪೋಲೀಸರೇ ಬೆಚ್ಚಿದರು.

ಪೋಲೀಸ್ ದೌರ್ಜನ್ಯಗಳಿಗೆ ಉದಾಹರಣೆಗಳಾಗಿ ಹಲವು ಘಟನೆಗಳು ನಮಗೆ ದೊರೆಯುತ್ತವೆ. ಅಂಕೋಲದಲ್ಲಿ ಸತ್ಯಾಗ್ರಹಿಗಳನ್ನು ಹೊರಗೆ ಹಾಕಿ ಅವರ ಮನೆಗಳಿಗೆ ಬೀಗ ಹಾಕುತ್ತಿದ್ದಾಗ ಕೆಲವು ಮಹಿಳೆಯರು ಪ್ರತಿಭಟನೆಯ ತಮ್ಮದೇ ಆದ ಹಾದಿಯನ್ನು ಕಂಡುಕೊಂಡರು. ಬೀಗಗಳನ್ನು ಒಡೆದು ಆ ಮನೆಗಳಲ್ಲಿ ವಾಸ ಮಾಡುತ್ತಿದ್ದರು. ಪೋಲೀಸರ ದೌರ್ಜನ್ಯ ಅವರಿಗೆ ಹೊಸದೇನೂ ಆಗಿರಲಿಲ್ಲ - ಒಲೆಯ ಮೇಲಿದ್ದ ಅನ್ನದ ಪಾತ್ರೆಗಳನ್ನು ಹೊರಗೆಸೆಯುವುದು, ಮಗುವಿರುವ ತೊಟ್ಟಿಲನ್ನು ಬೀದಿಗಿಡುವುದು, ಮಹಿಳೆಯರ ತೋಳುಗಳನ್ನು ಹಿಡಿದೆಳೆಯುವುದು, ಮನೆಗಳ ಹೊರಗೆ ನೂಕುವುದು, ಅಶ್ಲೀಲ ಬೈಗುಳಗಳನ್ನು ಬೈಯ್ಯುವುದು ಅಸಭ್ಯವಾಗಿ ವರ್ತಿಸುವುದು ಮುಂತಾದ ಕಾನೂನುಬಾಹಿರ ಕ್ರಮಗಳನ್ನು ಧೈರ್ಯದಿಂದ ಮಹಿಳೆಯರು ಎದುರಿಸುತ್ತಿದ್ದರು. ವಾಸ್ತೆಯಲ್ಲಿ ನಡೆದ ಸತ್ಯಾಗ್ರಹ ಇದಕ್ಕೊಂದು ಉತ್ತಮ ಉದಾಹರಣೆ.

ಆಗಸ್ಟ್ ತಿಂಗಳ 14ರಂದು ಸುಮಾರು ಹತ್ತು ಮಂದಿ ಮಹಿಳೆಯರು ಪೋಲೀಸರು ಬೀಗ ಹಾಕಿದ್ದ ಬೊಮ್ಮನಾಯಕನ ಮನೆಯ ಬೀಗ ಮುರಿದು ಒಳ ಸೇರಿದರು. ಇದನ್ನು ತಿಳಿದ ಪೋಲೀಸರು ಅಲ್ಲಿಗೆ ಬಂದು ಇವರನ್ನು ಹೊರ ಹಾಕಿದರಾದರೂ ಮನುದೇವಿ ಮತ್ತೆ ಒಳಗೆ ಹೋದಳು. ಮನುದೇವಿಯ ತೋಳು ಹಿಡಿದ ಪೋಲೀಸರು ಅವಳನ್ನು ಹೊರ ಹಾಕಿದರೂ ಮತ್ತೆ ಒಳ ಹೋಗಲು ಪ್ರಯತ್ನಿಸಿದ ಅವಳ ಕೂದಲನ್ನು ಹಿಡಿದೆಳೆದು ಬೂಟಿನಿಂದ ಒದೆಯುವಷ್ಟೇ ಅಲ್ಲ, ಕೆನ್ನೆಗೊಂದು ಬಲವಾದ ಏಟನ್ನು ಕೊಟ್ಟರು. ಮನುದೇವಿ ಆ ಕೂಡಲೇ ಪ್ರಜ್ಞಾಹೀನಳಾದಳು. ಅಷ್ಟಾದರೂ ಬಿಡದ ಪೋಲೀಸರು ಅವಳ ಕಣ್ಣಿಗೆ ಖಾರದ ಪುಡಿಯನ್ನು ತುರುಕಿ, ಕಾಲಿನಿಂದ ಒದೆದು, ನೆಲದ ಮೇಲೆಸೆದು ಅವಳು ಸಾಯಬಹುದೆಂಬ ಹೆದರಿಕೆಯಿಂದ ಹಾಗೇ ಬಿಟ್ಟು ಹೊರಟಿದ್ದರು. ಅಂಕೋಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡ ಮನುದೇವಿ ಮತ್ತೆ ಬೀಗ ಮುರಿಯಲು ಸಿದ್ಧಳಾದಳು!

ನವೆಂಬರ್ ತಿಂಗಳ 22ರಂದು ಕಾರವಾಕ್ಕೆ ರಾಜ್ಯಪಾಲರು ಭೇಟಿ ನೀಡುವ ಕಾರ್ಯಕ್ರಮವಿತ್ತು. ಅಂದು ಕಪ್ಪು ಬಾವುಟ ಪ್ರದರ್ಶನ ಮಾಡುವ ಕಾರ್ಯಕ್ರಮ ಸತ್ಯಾಗ್ರಹಿಗಳದಾಗಿತ್ತು. ಹೀಗೆ ಕಾರವಾರಕ್ಕೆ ಹೊರಟ ಹದಿನೈದು ಮಂದಿ ದಾರಿಯಲ್ಲಿಯೇ ಬಂಧಿತರಾದರು. ಆದರೆ ಕಪ್ಪುಬಾವುಟ ಪ್ರದರ್ಶನದ ಕಾರ್ಯಕ್ರಮ ನಿಲ್ಲಲಿಲ್ಲ. ಸತ್ಯಾಗ್ರಹಿಗಳ ಬಂಧನದ ಸುದ್ದಿ ತಿಳಿದ ಕಣಗಿಲಬೊಮ್ಮ ಇನ್ನೊಬ್ಬ ಸ್ವಯಂಸೇವಕನೊಂದಿಗೆ ಕಾಡಿನ ದಾರಿ ಹಿಡಿದು ಕಾರವಾರ ತಲುಪಿದ್ದಳು. ರಾಜ್ಯಪಾಲರು ಹಡಗಿನಿಂದಿಳಿದು ಮುಂದೆ ಸಾಗುತ್ತಲೇ 'ಗವರ್ನರರೆ, ಹಿಂದಿರುಹಿ ಹೋಗಿ' ಎಂಬ ಘೋಷಣೆಯೊಂದಿಗೆ ಕಪ್ಪುಬಾವುಟ ತೋರಿಸಿದಳು. ಮರಹತ್ತಿ ಕೂತಿದ್ದ ಸ್ವಯಂಸೇವಕ ಆ ಕೂಡಲೆ ಕರಪತ್ರಗಳನ್ನು ಎಸೆದು ಅಲ್ಲಿಂದ ತಪ್ಪಿಸಿಕೊಂಡ. ದಿಟ್ಟಮಹಿಳೆ ಕಣಗಿಲಬೊಮ್ಮ ಎಲ್ಲರೂ ಅಂದುಕೊಂಡಿದ್ದನ್ನು ಒಬ್ಬಳೇ ಮಾಡಿ ತೋರಿಸಿದ್ದಳು.

ಶಿರಸಿಯಲ್ಲಿ ಕಡಲೆರಾಮಕೃಷ್ಣ ಹೆಗಡೆಯವರ ಪತ್ನಿ ಸೀತಾಬಾಯಿ ಹನ್ನೆರಡು ಮಂದಿ ಮಹಿಳಾ ಗುಂಪೊಂದರ ನಾಯಕಿಯಾಗಿ ಪೋಲೀಸು ಠಾಣೆಗೆ ಬಂದಳು. 'ಏಕೆ ಬಂದೆ?' ಎಂಬ ಪ್ರಶ್ನೆಗೆ ತಾನು ಕಾನೂನುಭಂಗ ಮಾಡಲು ಬಂದಿರುವುದಾಗಿಯೂ, ಬ್ರಿಟಿಷ್ ಕಾನೂನು ಸತ್ತಿರುವುದಾಗಿಯೂ ತಿಳಿಸಿದಳು. ಜೈಲಿಗೆ ಹಾಕುವ ಬೆದರಿಕೆ ಪೋಲೀಸರಿಂದ ಬಂದಾಗ ತಾನದಕ್ಕೆ ಸಿದ್ಧವಿರುವುದಾಗಿ ತನ್ನ ಕೈಯಲ್ಲಿದ್ದ ಬಾವುಟವನ್ನೆತ್ತಿ ಹಿಡಿದು ತಿಳಿಸಿದಳು. ಬಾವುಟವನ್ನು ಕಿತ್ತೆಸೆಯಲು ಮುಂದಾದ ಪೋಲೀಸರಿಗೆ ತನ್ನ ಮೈಕೈ ಮುಟ್ಟುವುದು ಕಾನೂನು ಬಾಹಿರವೆಂದೂ, ಕಾನೂನಿನ ಚೌಕಟ್ಟಿನೊಳಗೆ ವರ್ತಿಸಬೇಕೆಂದೂ ಅಧಿಕಾರಿಗಳಿಗೆ ತಿಳಿಸಿದಳು. ಅವರು ಮರುಮಾತಿಲ್ಲದೆ ಸುಮ್ಮನಾಗಬೇಕಾಯಿತು. ಮುಂದೆ ಅರಣ್ಯ ಸತ್ಯಾಗ್ರಹ ನಡೆದಾಗಲೂ ಪೋಲೀಸರು ಮಹಿಳಾ ಸತ್ಯಾಗ್ರಹಿಗಳ ತಂಟೆಗೆ ಹೋಗಲಿಲ್ಲ.

ಕರಪತ್ರ ಹಂಚುವಿಕೆ

ಸತ್ಯಾಗ್ರಹ ಚಳುವಳಿಯ ಕಾವು ಒಂದೆಡೆಯಿಂದ ಮತ್ತೊಂದೆಡೆಗೆ ಹರಡದಂತೆ ಪತ್ರಿಕೆಗಳ ಮೇಲೆ ನಿರ್ಬಂಧ ಹೇರಿದ ಸಂದರ್ಭದಲ್ಲಿ ಚಳುವಳಿಕಾರರು ಅಂಥ ನಿರ್ಬಂಧಗಳನ್ನು ಮೀರಿ ಕರಪತ್ರಗಳನ್ನು ಮುದ್ರಿಸಿ ಹಂಚತೊಡಗಿದರು. ಕೆಲಕಾಲ ಶಿರಸಿಯ ಮನೆಯೊಂದರಲ್ಲೇ ಮುದ್ರಣಗೊಳ್ಳುತ್ತಿದ್ದ ಕರಪತ್ರಗಳು ನಂತರದಲ್ಲಿ ದಟ್ಟ ಅರಣ್ಯದಲ್ಲಿ ಮುದ್ರಿತವಾಗುತ್ತಿದ್ದವು. ಇವುಗಳನ್ನು ಎಲ್ಲೆಡೆ ಹಂಚುವ ಭಾರ ಚಳುವಳಿಕಾರರದಾಗಿತ್ತು. ಈ ಕೆಲಸದಲ್ಲಿ ಮಹಿಳೆಯರು ವಹಿಸಿದ ಪಾತ್ರ ಕಡಿಮೆಯದೇನಲ್ಲ.

ನೆಂಟರ ಮನೆಗೆಂದು ಕರಪತ್ರಗಳೊಂದಿಗೆ ಹೊರಡುತ್ತಿದ್ದ ಮಹಿಳೆಯರನ್ನು ಅನುಮಾನಿಸುವುದಾಗಲೀ, ತಡೆಯುವುದಾಗಲೀ ಪೋಲೀಸರಿಗೆ ಸಾಧ್ಯವಾಗುತ್ತಿರಲಿಲ್ಲ. ಒಮ್ಮೆ ಭಾಗೀರಥಿಬಾಯಿ ಕರಪತ್ರ ಹಂಚುತ್ತಿದ್ದರೆಂಬ ಗುಮಾನಿಯ ಮೇಲೆ ಪೋಲೀಸರ ಕೈಗೆ ಸಿಕ್ಕಿಹಾಕಿಕೊಳ್ಳುವ ಪ್ರಸಂಗ ಬಂತು. ಅವರು ಅದರಿಂದ ತಪ್ಪಿಸಿಕೊಂಡ ಬಗೆ ಮಾತ್ರ ಕುತೂಹಲಕರ.

ಒಮ್ಮೆ ಯಾರೋ ಕೊಟ್ಟ ದೂರಿನ ಮೇಲೆ ಪೋಲೀಸರು ಇವರ ಮನೆಗೆ ನುಗ್ಗಿ ಕರಪತ್ರಗಳಿಗಾಗಿ ಎಲ್ಲಾ ಕಡೆ ಹುಡುಕಾಡಿದರು. ಕೊನೆಗೆ ಇವರು ಕೂತಿದ್ದ ಸ್ಥಳ ಹುಡುಕಬೇಕು ಎನ್ನುವಷ್ಟರಲ್ಲಿ ಭಾಗೀರಥಮ್ಮ ತಾನು ಮುಟ್ಟಾಗಿರುವುದಾಗಿಯೂ, ತನ್ನನ್ನು ಮೂರು ದಿನಗಳವರೆಗೆ ಯಾರೂ ಮುಟ್ಟಬಾರದೆಂದೂ ತಿಳಿಸಿದರು. ಸಂಪ್ರದಾಯವನ್ನು ಮುರಿದು ಜನರ ಕೋಪಕ್ಕೆ ಬಲಿಯಾಗುವ ಇಚ್ಛೆ ಪೋಲೀಸರಿಗಿರಲಿಲ್ಲ. ಅವರು ಬಂದ ಹಾಗೇ ಹಿಂತಿರುಗಿದರು. ಕರಪತ್ರಗಳು ಭಾಗೀರಥಿಬಾಯಿ ಮಲಗಿದ್ದ ಹಾಸಿಗೆಯೊಳಗೆ ಸುರಕ್ಷಿತವಾಗಿದ್ದವು. ಯಾರಿಗೂ ತಿಳಿಯದಂತೆ ಕರಪತ್ರಗಳನ್ನು ಹಾಸಿಗೆಯಲ್ಲಿಟ್ಟು ಹೊಲೆಯುವ ಭಾಗೀರಥಿ ಬಾಯಿಯ ಕೈಚಳಕ ಮಾತ್ರ ಯಾರಿಗೂ ತಿಳಿಯುವಂತಿರಲಿಲ್ಲ!

ಕ್ವಿಟ್ ಇಂಡಿಯಾ ಚಳುವಳಿ

ಅಂದು 1943ರ ಆಗಸ್ಟ್ 9, ಇದಕ್ಕೆ ಒಂದು ವರ್ಷದ ಹಿಂದೆ ಕ್ವಿಟ್ ಇಂಡಿಯಾ ಚಳುವಳಿ ಆರಂಭವಾಗಿತ್ತು. ರಾಷ್ಟ್ರೀಯ ನಾಯಕರು ಕೆಲವರು ಜೈಲಿನಲ್ಲಿ, ಇನ್ನು ಕೆಲವರು ಭೂಗತ ರಾಗಿದ್ದರು. ಕಿತ್ತೂರಿನ ಒಂದು ಭಾಗವಾದ ಸೌಂದತ್ತಿಯಲ್ಲಿ ಪೋಲೀಸು ಠಾಣೆಯನ್ನು ಸುಟ್ಟಿದ್ದರು. ಸರಕಾರಿ ಕಛೇರಿಗಳನ್ನು ಲೂಟಿ ಮಾಡಿದ್ದರು. ಪೋಲೀಸರು ಚಳುವಳಿಕಾರರ ತಲಾಶ್‌ನಲ್ಲೇ ಇದ್ದ ಸಮಯ. ಅಂದು ಇಪ್ಪತ್ತು ಮಂದಿ ಮಹಿಳೆಯರು ಕರಿಕಟ್ಟೆಯಲ್ಲಿ ನೆರೆದರು. ಇವರೆಲ್ಲಾ ಸೌಂದತ್ತಿ, ಹೂಲಿ, ಉಗರ್‌ಗೋಳ್, ಹಿರೆಕುಂಬಿಗಳಿಂದ ಬಂದಿದ್ದರು. ಕೈಗಳಲ್ಲಿ ತ್ರಿವರ್ಣ ಧ್ವಜ, ಬಾಯಲ್ಲಿ 'ಕ್ವಿಟ್ ಇಂಡಿಯಾ', 'ಗಾಂಧೀಜಿಯನ್ನು ಬಿಡುಗಡೆ ಮಾಡಿ', 'ಮಾಡುವೆವು ಇಲ್ಲಾ ಮಡಿವೆವು' ಮುಂತಾದ ಘೋಷಣೆಗಳು. ದಾರಿಯುದ್ದಕ್ಕೂ ಭವ್ಯ ಸ್ವಾಗತ ಪಡೆದ ಇವರು ತಾಲ್ಲೂಕು ಕಛೇರಿ ತಲುಪಿದಾಗ ಮಧ್ಯಾಹ್ನದ 12 ಗಂಟೆ. ಘೋಷಣೆಗಳನ್ನು ಕೂಗುತ್ತಾ ಕಛೇರಿಗೆ ನುಗ್ಗಿದ ಇವರು ಕಡತಗಳು ಮತ್ತಿತರ ದಾಖಲೆಗಳನ್ನು ನಾಶ ಮಾಡಿದರು. "ಈ ಸರಕಾರ ನಮ್ಮ ಸರಕಾರ ಅಲ್ಲ. ಬ್ರಿಟಿಷರು ಹಿಂದಿರುಗಬೇಕು" ಮುಂತಾಗಿ ಕೂಗುತ್ತಲೇ ಇದ್ದರು. ಅಲ್ಲೇ ಇದ್ದ ಪೋಲೀಸರು ಗುಂಪನ್ನು ಕಂಡು ಬೆದರಿ ಹೆಚ್ಚಿನ ಪೋಲೀಸು ನೆರವನ್ನು ಪಡೆಯಲು ಓಟ ಕಿತ್ತಿದ್ದರು. ಅವರು ಹಿಂದಿರುಗಿ ಬಂದಾಗ ಅಲ್ಲಿ ಸೇರಿದ್ದ ಜನ ಸತ್ಯಾಗ್ರಹಿಗಳಿಗೆ ಹಾರ ಹಾಕುತ್ತಿದ್ದರು. ತಾವೇ ಬಂಧನಕ್ಕೊಳಗಾದ ಸತ್ಯಾಗ್ರಹಿಗಳೆಂದರೆ, ಬಸಮ್ಮ ಸುತಗಟ್ಟಿ, ಈರವ್ವ ವಿಭೂತಿ, ಬಸವ್ವ ಕರಿಕಟ್ಟಿ, ಗೌರಮ್ಮ, ಫಕೀರಮ್ಮ ಕುರುಬರ್, ಫಕೀರಮ್ಮ ಯಾಮೋಜಿ, ಗಂಗವ್ವ ಪೂಜಾರಿ, ಯಮನವ್ವ ಸೊಂತಕ್ಕಿ, ಗಂಗವ್ವ ಇತಪಿ, ಬಸವಣ್ಣೆವ್ವ ದುಗ್ಗಾಣಿ ಹಾಗೂ ಸಾವಕ್ಕ ದೇಸಾಯಿ.

ಅಕ್ಕತಂಗೇರಹಳ್ಳಿ ಮತ್ತು ಪಚಾಪುರಗಳಲ್ಲಿ ನಡೆದ ಇಂಥದೇ ಕಾರ್ಯಕ್ರಮಗಳಲ್ಲಿ ಗಂಗವ್ವ ಹೊಳಿಯಾಚೆ, ತಂಗೆವ್ವ ಬಡಿಗೇರ, ಚನ್ನಬಸವ್ವ ಭದ್ರಳಿ, ಬಾಲವ್ವ ಚೋರಗಲ್, ಕಾಶವ್ವ ಹೊಸಮನಿ, ಸರಸ್ವತಿ ಬಾಯಿ ಚೌಗುಲೆ, ನಿಂಗವ್ವ ಚಿಕೋಡಿ ಮತ್ತಿತರರು.

ನಾಗನೂರು ಸಂಪಗಾಂವನಿಂದ ನಾಲ್ಕು ಮೈಲಿ ದೂರದಲ್ಲಿದೆ. ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಹೂಡಿದ

ಕುಂತಿ - ಒಂದು ಅನಿಸಿಕೆ

ಡಾ. ಎಸ್. ವಿ. ಪ್ರಭಾವತಿಯವರು ಕನ್ನಡ ಸಾಹಿತ್ಯದಲ್ಲಿ ದ್ರೌಪದಿ ಕುರಿತ ಸಂಶೋಧನೆ, ದ್ರೌಪದಿ ಕಾದಂಬರಿ ಮತ್ತು ದ್ರೌಪದಿ ಕುರಿತ ಅಧ್ಯಯನದ ಮೂಲಕ ಓದುಗರಿಗೆ ಪರಿಚಿತರು. ಕವಿಯೂ ಆದ ಪ್ರಭಾವತಿಯವರು 'ಮಳೆ ನಿಂತ ಮೇಲಿನ ಮರ' ಎಂಬ ಕವನ ಸಂಕಲನ ತಂದಿದ್ದಾರೆ. ಅವರ ಮತ್ತೊಂದು ಕಾದಂಬರಿ 'ಕುಂತಿ' ಕಳೆದ ವರ್ಷ ಪ್ರಕಟವಾಯಿತು. ಆ ಪುಸ್ತಕ ಕುರಿತು ಒಬ್ಬ ಓದುಗಳಾಗಿ ನನ್ನ ಅನಿಸಿಕೆಗಳನ್ನು ಓದುಗರ ಮುಂದಿರಿಸಿದ್ದೇನೆ.

ಪ್ರಭಾವತಿಯವರು ಸ್ತ್ರೀವಾದಿ ದೃಷ್ಟಿಕೋನದಿಂದ ಬರೆಯುವ ಲೇಖಕಿ ಎಂದು ಪರಿಚಿತರಾಗಿದ್ದಾರೆ. ಆದರೆ ಪುಸ್ತಕ ಓದಿದಾಗ ಕೊಂಚ ಅನುಮಾನವಾಯ್ತು. ಕುಂತಿಯ ಹುಟ್ಟಿನಿಂದ ಸಾಯುವವರೆಗೆ ನಡೆದ ಮಹಾಭಾರತದ ಘಟನೆಗಳನ್ನು ಕುಂತಿಯ ಕಣ್ಣಿನಿಂದ ನೋಡಲಾಗಿದೆ. ಪುರಾಣದ ಸ್ತ್ರೀ ಪಾತ್ರಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಮತ್ತೊಮ್ಮೆ ಸೃಷ್ಟಿಸುವ ಉದ್ದೇಶದಿಂದ ಬರೆದ ಕಾದಂಬರಿ ಎಂದು ಲೇಖಕಿ ಹೇಳಿದ್ದಾರೆ. ಈ ಮರು ಸೃಷ್ಟಿ ಎಂದರೆ ಅತಿಮಾನುಷ ಶಕ್ತಿಯನ್ನು, ದೈವಿಕ ಶಕ್ತಿಯನ್ನು ಕಳಚಿ ಹಾಕಿ ಸಾಮಾನ್ಯ ಮನುಷ್ಯರಂತೆ ಚಿತ್ರಿಸುವುದೊ ಅಥವಾ ಭೂತದ ಪಾತ್ರಗಳನ್ನು ವರ್ತಮಾನದ ಸಂಘರ್ಷಕ್ಕೆ ಒಡ್ಡಿ ಚಿತ್ರಿಸುವುದೊ ಎಂಬ ವಿಷಯ ಕಾದಂಬರಿಯನ್ನು ಓದುವಾಗ ಕಾಡತೊಡಗಿತು. ಇವೆರಡೂ ಈ ಕಾದಂಬರಿಯಲ್ಲಿ ಆಗಿಲ್ಲ ಎನಿಸಿತು.

ಕುಂತಿಯಲ್ಲಿ ಭೀಮ ಎಷ್ಟು ಬಲಶಾಲಿ ಎಂದರೆ ಸಣ್ಣ ಕೂಸಿದ್ದಾಗ ಮಾದ್ರಿ ಆಡಿಸುತ್ತ ಕಲ್ಲಿನ ಮೇಲೆ ಬೀಳಿಸಿದಾಗ ಕಲ್ಲು ಸೀಳುಬಿಡುತ್ತದೆ! ಅಣ್ಣನನ್ನು ಕೊಂದ ಪಾಪ ಭೀಮನ ಸುತ್ತ ಕಪ್ಪು ಛಾಯೆಯಾಗಿ ಸುತ್ತುತ್ತದೆ, ಅದನ್ನು ನೋಡುವ ಕಣ್ಣು ಯುದಿಷ್ಠಿರನಿಗೆ ಮಾತ್ರ ಇರುತ್ತದೆ! ಮತ್ತೆ ವರ್ತಮಾನದೊಂದಿಗೆ ಕುಂತಿಯನ್ನು ಸಂಘರ್ಷಕ್ಕೆ ಒಡ್ಡುವ ಪ್ರಯತ್ನವೆ ಇಲ್ಲವೆನ್ನಬೇಕು. ಕಾದಂಬರಿಯಲ್ಲಿ ಹೆಣ್ಣಿನ ಮನಸ್ಸಿನಲ್ಲಾಗುವ ಅಸಹನೆ, ಅಸಹಾಯಕತೆ, ದುಗುಡದ ಚಿತ್ರಣ ಮನಸ್ಸಿಗೆ ತಟ್ಟುವುದಿಲ್ಲ.

ಕಾದಂಬರಿಯಲ್ಲಿನ ಕುಂತಿ, ವಸುದೇವ, ದೇವಕಿಯನ್ನು ಸೆರೆಗೆ ತಳ್ಳಿ ರಕ್ತಪಾತ ನಡೆಸಿ ಸಿಂಹಾಸನವೇರಿದ ಕಂಸನ ಬಗ್ಗೆ ತಿಳಿದು 'ಅಯ್ಯೊ' ಎನ್ನುತ್ತಾಳೆ. (ಪುಟ : 5 ಪ್ಯಾ. 1) ಹದಿಮೂರನೆ ವಯಸ್ಸಿಗೆ ನಿಜವಾದ ಗಂಡಸಿನ ಕಲ್ಪನೆ ಇದ್ದ ಕುಂತಿ ಗಂಡಸನ್ನು ಒಲಿಸಿಕೊಳ್ಳುವುದನ್ನು ತಿಳಿದವಳು. ಮಗುವನ್ನು ಬಿಟ್ಟುಬಂದ ಸ್ವಲ್ಪ ಸಮಯದಲ್ಲಿಯೇ ಸ್ವಯಂವರಕ್ಕೆ ಸಿದ್ಧಳಾಗುತ್ತಾಳೆ. ಗಂಡಸಿನ ಮೈಕಟ್ಟು ಅವಳ ಆಯ್ಕೆಯ ಮಾನದಂಡ. ತನಗಿಂತ ಎತ್ತರವಾಗಿದ್ದ ಗಂಡಸೊಬ್ಬ ತನ್ನೆದುರು ತಲೆಬಾಗಿ ನಿಂತಾಗ ಆಕೆ ರೋಮಾಂಚನಗೊಂಡು ವರಮಾಲೆ ಹಾಕುತ್ತಾಳೆ. ಋಷಿಯೊಬ್ಬ ತನ್ನ ತಪಸ್ಸಿನ ಶಕ್ತಿಯನ್ನೆಲ್ಲ ಕುಂತಿಯನ್ನು ತಣಿಸಲು ಬಳಸಬೇಕೆಂಬಂಥ ಕಾಮಾಸಕ್ತಿಯುಳ್ಳವಳು ಆಕೆ.

ಕಾದಂಬರಿಯಲ್ಲಿ ಹೆತ್ತ ತಂದೆ ತಾಯಂದಿರನ್ನು ಬಿಟ್ಟು ಬಂದು ಸಾಕು ತಂದೆಯೊಂದಿಗೆ ಬದುಕಲು ಬೇರೆಯದೇ ಊರಿಗೆ ಬರುವ ಕುಂತಿ disturb ಆಗುವುದೇ ಇಲ್ಲ. ಮಗುವನ್ನು ಬಿಟ್ಟು ಬಂದಾಗ ಹೆಚ್ಚು ದುಗುಡಗೊಳ್ಳದೆ ಮದುವೆಗೆ ಸಿದ್ಧಳಾಗುತ್ತಾಳೆ.

ಕುಂತಿ Sexually ತುಂಬಾ Active ಎಂಬುದಕ್ಕೆ ಲೇಖಕಿ ಕೊಡುವ ವಿವರಣೆಗಳು ಉದಾ.ಗೆ "ಪಾಂಡುವಿನಂತೆ ಚಿಲ್ಲರೆ ಚೇಷ್ಟೆಗಳಲ್ಲಿ ತನ್ನ ಶಕ್ತಿವ್ಯಯ ಮಾಡದೆ ತನ್ನ ತಪಸ್ಸಿನಿಂದ ಸಂಚಯಿಸಿದ ಶಕ್ತಿಯನ್ನೆಲ್ಲಾ ತನ್ನನ್ನು ತಣಿಸುವುದರಲ್ಲಿ ತೋರಿಸಿದ." ಪುಟ : 31, " ಕುರುಡನೂ, ಸಿಂಹಾಸನದ ಹಕ್ಕು ಕಳೆದುಕೊಂಡವನೂ ಆದ ದೃತರಾಷ್ಟ್ರ ಬಹುಶಃ ಯೌವನೆಯರಾದ ದಾಸಿಯರಿಗೆ ಬೇಕಾಗಲಿಲ್ಲ..... ಸುಂದರ ಪಾಂಡುವಿನ ಮೇಲೆ ಹಸಿದ ದಾಸಿಯರ ಕಣ್ಣು ಬಿದ್ದು....... ಕಾಮಕಲೆಯಲ್ಲಿ ನಿಷ್ಣಾತರಾದ ದಾಸಿಯರು..... ಒಡತಿಯಂತಹ ದೊಡ್ಡ ಹೆಂಗಸಿಗೆ ನಿರ್ವೀರ್ಯ ಗಂಡ......"ಪುಟ 17 ಲೈಂಗಿಕತೆಯ ಬಗೆಗಿನ Myth ಅನ್ನ ಇನ್ನೂ ಗಟ್ಟಿಗೊಳಿಸುತ್ತವೆ. ಒಂದು ಹೆಣ್ಣು ತುಂಬಾ ಗಟ್ಟಿಗಳು ಎಂಬುದಕ್ಕೆ Sexual Potencyಯೇ Criteria ಆಗಬೇಕಿಲ್ಲ. ಗಂಡಿಗೂ ಅಷ್ಟೇ. ಹೆಂಗಸರು ಬರಿ ವೀರ್ಯವಂತರನ್ನಷ್ಟೇ ಬಯಸುವುದಿಲ್ಲ. ಎತ್ತರ, ಗಾತ್ರಕ್ಕೂ, ಲೈಂಗಿಕಾಸಕ್ತಿಗೂ ಸಂಬಂಧ ಇರಲೇಬೇಕೆಂದಿಲ್ಲ.

ಹೆರುವ, ಪೋಷಿಸುವ ಮೂಲಕವಷ್ಟೇ ಹೆಣ್ಣು ಶಕ್ತಳೆಂಬ ಮಾಮೂಲಿ ಚಿತ್ರಣವನ್ನು ಕಾದಂಬರಿಯಲ್ಲಿ ಕಾಣಬಹುದು. "ಮೊಮ್ಮಕ್ಕಳ ಮೇಲೆ ಮೊಮ್ಮಕ್ಕಳು. ಇನ್ನೆರಡು ವರ್ಷಗಳಲ್ಲಿ ದ್ರೌಪದಿಗೆ ಇನ್ನೆರಡು ಮಕ್ಕಳು.... ಮಗುವಿಗೆ ಮೂರು ತಿಂಗಳಾಗುವುದಕ್ಕಿಲ್ಲ ಅವಳು ಮತ್ತೆ ಬಸುರಿ. ಮೊದಲನೆಯದು ಇನ್ನೂ ಮೊಲೆ ಹಾಲು ಬಿಡದಿರುವಾಗಲೇ ಎರಡನೆಯದು ಹಾಲು ಕುಡಿಯಲು ಆಕ್ರಮಿಸುತ್ತಿತ್ತು. ಹಾಲಿನಿಂದ ತುಂಬಿ ತೊನೆಯುವ ಅವಳ ವೃಕ್ಷಸ್ಥಲಕ್ಕೆ ಬಡುವೆಂಬುದೇ ಇರಲಿಲ್ಲ. ಬಸುರಿಯಾದಾಗಲೂ ಬಾಣಂತಿಯಾದಾಗಲೂ ತುಂಬಿದ ಎದೆ ಜಘನಗಳೊಂದಿಗೆ ಅರಮನೆ ತುಂಬಾ ಓಡಾಡುವ ಸೊಸೆಯನ್ನು ನೋಡುವುದೇ ಕುಂತಿಗೆ

ಹೆಮ್ಮೆ, (ಪುಟ : 71) ಓದಿದಾಗ ದ್ರೌಪದಿ ಹೆಣ್ಣೋ ಅಥವಾ ಈಯುವ ದನವೋ ಅನ್ನಿಸಿತು. ಸ್ತ್ರೀ ಸಂವೇದನೆ, ಸ್ತ್ರೀವಾದಿ ನೆಲೆಯಿಂದ ಬರೆಯುವವರೆನಿಸಿಕೊಂಡ ಪ್ರಭಾವತಿಯವರ ಈ ಮನೋಧರ್ಮ ಆಶ್ಚರ್ಯ ತರುತ್ತದೆ. ತಾಯ್ತನದ ಬಗ್ಗೆ ಇರುವ Myths, gloritiation ಬಗ್ಗೆ ನಂಬಿಕೆಯುಳ್ಳವರು ನಮ್ಮ ವಾಣಿ ವಿಲಾಸದ ಮಹಿಳೆಯರ ಆಸ್ಪತ್ರೆಯನ್ನು ತಪ್ಪದೇ ನೋಡಿ ಬರಬೇಕು. ಗೌನಿನ ಹಿಂಬದಿಗೆ ಒಂದೇ ಒಂದು ದಾರವಾಗಲಿ, ಗುಂಡಿಯಾಗಲಿ ಇಲ್ಲದೆ ಕುಂಡಿ ಮುಚ್ಚಿಕೊಳ್ಳಲು ಹಿಂದೆ ಕೈ ಹಾಕಿ ಗೌನ್ ಅನ್ನ ಮಡಿಚಿ ಹಿಂದೆ ಹಿಡಿದುಕೊಂಡು ಒಂದು ಕೈಯಲ್ಲಿ ಆಸ್ಪತ್ರೆ ಚೀಟಿ ಹಿಡಿದುಕೊಂಡು, ಕಾರಣಕರ್ತ ಗಂಡಸಿನ ಸುಳಿವೆ ಇಲ್ಲದೆ ಅಬಾರ್ಷನ್‌ಗೆ, ಕೈ ಆಪರೇಷನ್ನು, ಕರೆಂಟ್ ಆಪರೇಷನ್‌ಗೆ ಸಾಲಾಗಿ ನಿಲ್ಲುವ ಹೆಂಗಸರನ್ನು ನೋಡಿದಾಗ ಎದೆ, ಜಘನಗಳ 'ಭಾರ' ನಿಜವಾಗಿಯೂ ಅರ್ಥವಾಗುವುದು. 'ಅಕ್ಷಯಾಂಬರ' ಪ್ರಸಂಗದಲ್ಲಿ ಇದೇ ಲೇಖಕಿಯ 'ದ್ರೌಪದಿ' ಕೃತಿಗೂ, 'ಕುಂತಿ' ಕೃತಿಗೂ ವ್ಯತ್ಯಾಸಗಳಾಗುತ್ತವೆ! ವೈರುಧ್ಯಗಳು ಹೇರಳವಾಗಿವೆ. ಲೇಖಕಿಯ ಮನಸ್ಸಿನ ಸ್ತ್ರೀಪರವಾದ ತುಡಿತದ ಬಗ್ಗೆ ಗುಮಾನಿಗಳಿಲ್ಲ. ಆದರೆ ಒಂದು 'ಇಮೇಜ್' ಇರುವ ಪಾತ್ರವನ್ನು ವಾಸ್ತವಕ್ಕೆ ತರುವಾಗ ಸಡಗರಕ್ಕಿಂತ ಪ್ರತಿಯೊಂದು ಹಂತದಲ್ಲೂ ಪಾತ್ರದ ಸುತ್ತಲ ಸನ್ನಿವೇಶ, ವಾತಾವರಣ, ಇತರ ಪಾತ್ರಗಳು ಇವೆಲ್ಲದರ ಜೊತೆಗೆ ನಡೆಯುವ ಕ್ರಿಯೆ ಹಾಗೂ ಅದನ್ನು ಕುರಿತ ಲೇಖಕಿಯ ನಿಲುವು ತುಂಬ ಸ್ಪಷ್ಟವಾಗಿರುವುದು ಅತ್ಯಗತ್ಯ.

ಇಡೀ ಕಾದಂಬರಿಯಲ್ಲಿ ಒಂದೆರಡು ಕಡೆ ಮಾತ್ರ ಕುಂತಿ ಮಾನವೀಯತೆಯುಳ್ಳ ಹೆಣ್ಣಾಗಿ ಕಾಣಿಸುತ್ತಾಳೆ. ಯುದ್ಧವೆಂದರೆ.... ಈ ರಕ್ತಪಾತವನ್ನು ಇವರು ದಿಗ್ವಿಜಯವೆಂದುಕೊಳ್ಳುತ್ತಾರೆ..... (ಪುಟ 19), ಸ್ವರ್ಗ ನರಕಗಳ ಬಗ್ಗೆ ನನಗೆ ನಂಬಿಕೆಯಿಲ್ಲ. ನೀವು ರಾಜರು ಪ್ರಜೆಗಳನ್ನು ಬೆದರಿಸಲೆಂದೇ ಅಂತಹ ನಂಬಿಕೆಯನ್ನು ಹುಟ್ಟು ಹಾಕಿದವರು..... ಅರಮನೆಯ ಲಂಪಟತನದ ಕಥೆ ನಿನಗೆ ತಿಳಿಯದ್ದೇನಲ್ಲ.... ಇಲ್ಲಿ ಕುಂತಿ ಹತ್ತಿರವೆನಿಸುತ್ತಾಳೆ. ಓದಿದ ನಂತರ ಕುಂತಿ ಎಲ್ಲೂ ಮನಸ್ಸಿನಲ್ಲಿ ಉಳಿಯುವುದಿಲ್ಲ, ಕಾಡುವುದಿಲ್ಲ. ಹೆತ್ತ ತಂದೆತಾಯಿಯರಿದ್ದೂ ಬೇರೆಯವರ ಮಗಳಾಗುವ, ಗಂಡನನ್ನು ಕಟ್ಟಿಕೊಂಡರು ಬೇರೆ ಗಂಡಸರಿಂದ ಮಕ್ಕಳನ್ನ ಹೆರುವ, ವೀರಾಧಿವೀರ ಮಕ್ಕಳಿದ್ದು ಇನ್ನಾರ ಬಳಿಯಲ್ಲೋ ಬದುಕುವ ಕುಂತಿ ಅನುಭವಿಸಿದ ಅವಮಾನ, ದುಗುಡ, ಸಂಕಟಗಳ ಅನುಭವವನ್ನು ಕಾದಂಬರಿ ಕಟ್ಟಿ ಕೊಡುವುದಿಲ್ಲ.

ಗಂಡ ಷಂಡನೆಂದು ಜರೆಯುವುದನ್ನ, ಇನ್ನೊಬ್ಬಳೊಂದಿಗೆ ಸಂಬಂಧವಿದೆಯೆಂದು ಗಂಡನನ್ನು ಧಿಕ್ಕರಿಸುವ, ಕಾಮಾಸಕ್ತಿಯನ್ನು ಧೈರ್ಯವಾಗಿ ವ್ಯಕ್ತಪಡಿಸುವ, ಯಶಸ್ವಿ ಹೆಣ್ಣನ್ನು ಚಿತ್ರಿಸುವುದೇ ಸ್ತ್ರೀವಾದಿ ಚಿತ್ರಣವೆನಿಸಿಕೊಳ್ಳುತ್ತಿರುವುದು ವಿಷಾದನೀಯ. ಲೈಂಗಿಕತೆ, ತಾಯ್ತನ, ಗಂಡು ಹೆಣ್ಣಿನ ಸಂಬಂಧದಲ್ಲಿನ Mythಗಳನ್ನು ಮುರಿಯಲು ಮಹಿಳಾ ಚಳುವಳಿ ಹೋರಾಟವನ್ನೆ ನಡೆಸಿತು. ತುಳಿಯುವ ಸಮಾಜದಲ್ಲಿ, ನಿತ್ಯದ ಜಂಜಾಟದಲ್ಲಿ 'ಇಲ್ಲ'ವಾಗದೆ ಜೀವಂತವಾಗಿರುವ ಹೆಂಗಸರನ್ನ ನಮ್ಮೊಂದಿಗೆ ಕಾಣಬಹುದು. ಇಂತಹ ಹೆಂಗಸರು ನಮ್ಮ ಕತೆ, ಕಾದಂಬರಿಯ ಜೀವವಾಗಲಾರರೆ? ಪರಿಚಿತ ವೈದ್ಯೆಯೊಬ್ಬರ ಮಾತು ನೆನಪಾಗುತ್ತಿದೆ. ಪತ್ರಿಕೆಯ ಚಂದಾದಾರರಾದ ಆಕೆ ಚಂದಾಹಣ ಪಡೆಯಲು ಹೋದಾಗ "ನಿಮ್ಮ ಪತ್ರಿಕೆಗೆ ನನ್ನದೊಂದು ಸಲಹೆ ಇದೆ" ಎಂದರು. ದಯವಿಟ್ಟು ಹೇಳಿ ಅದು ನಮಗೆ ಮುಖ್ಯ ಎಂದೆ.

"ದಯವಿಟ್ಟು ಆಗಿ ಹೋಗಿರೊ ಸೀತೆ, ಕುಂತಿ, ದ್ರೌಪದಿಯರ ಬಗ್ಗೆ ಬರೆಯಬೇಡಿ. ರಾಶಿ interopretationsಗಳು ಬಂದುಬಿಟ್ಟಿವೆ. ಇನ್ನು ಸಾಕು, ಹಿಂದೆ ಆಗಿ ಹೋದ ರಾಣಿ ಮಹಾರಾಣಿಯರ ಕತೆ ನಮಗೆ ಬೇಡ. ನಾವು ಹೆಂಗಸರು ಮನೆ, ಮಕ್ಕಳು, ಕಛೇರಿ, ಬಸ್ಸು ಎಂದು ತೋಳಲಾಡುತ್ತೇವೆ. ನಮ್ಮ ನಿತ್ಯದ ಜಂಜಾಟಕ್ಕೆ ಉತ್ತರವಾಗಬಲ್ಲಂಥ ಉದಾಹರಣೆ, ನಮ್ಮ ಜೀವನಕ್ಕೆ ಹತ್ತಿರವಾಗುವ ಬರವಣಿಗೆ ನಮಗೆ ಬೇಕು. ಅರಮನೆ ಹೆಂಗಸರ ಕತೆಗಳನ್ನು ಕಟ್ಟಿಕೊಂಡು ನಾವೇನ್ ಮಾಡಬೇಕು?" ಎಂದರು.

ಗಂಭೀರವಾಗಿ ಯೋಚಿಸಬೇಕಾದ ಮಾತೇ ಅಲ್ಲವೆ? ಹೀಗೆ ಹೇಳುವಾಗ 'ಕುಂತಿ'ಯಂಥ ಸಂಕೀರ್ಣ ಪಾತ್ರದ ಬಗ್ಗೆ ನಿರ್ಲಕ್ಷ್ಯವಲ್ಲ. ಇವತ್ತಿಗೂ ಪ್ರಸ್ತುತವಾಗುವ ಅವಳ ಒಳತೋಟಿಯನ್ನು ಗುರುತಿಸಿಕೊಳ್ಳುವುದು ಅಗತ್ಯ. ಒಂದು ಬದುಕನ್ನು ಮಿದಿಕರಿಸಿ ಸಂಭ್ರಮಿಸುವ ಬೌದ್ಧಿಕ ಜಗತ್ತಿನ ಹುನ್ನಾರಗಳನ್ನು ನಾವು ನಗ್ನಗೊಳಿಸುವುದು ಯಾವಾಗ?

- ಸರಸ್ವತಿ ದು.

ಕುಂತಿ, ಲೇಖಕಿ : ಎಸ್. ವಿ. ಪ್ರಭಾವತಿ,

ಮುದ್ರಕರು : ಸ್ನೇಹಾ ಪ್ರಿಂಟರ್ಸ್, 22, 2ನೇ ಮೇನ್, ಅತ್ತಿಗುಪ್ಪೆ, ವಿಜಯನಗರ 2ನೇ ಹಂತ, ಬೆಂಗಳೂರು - 40.

ಮಕ್ಕಳನ್ನು ತಬ್ಬಿಕೊಂಡು ಅಳುಗರೆಯುವಳು. ಅವುಗಳು ತಾಯಿಯ ಕಣ್ಣೊರೆಸಿಕೊಂಡು ಅಮ್ಮಾ, ನೀನು ಅಳಬೇಡ, ನೀನು ಅತ್ತರೆ ನಮಗೂ ಅಳು ಬರುತ್ತದೆ ಅನ್ನುವವು. ಆದರೆ ಮಾಧವನನ್ನು ಕಂಡಾಕ್ಷಣ ತಾಯಿಯ ಸೆರಗಲ್ಲಿ ಅಡಗಿ ಕೂತು ಸೆರಗಿನೆಡೆಯಿಂದ ಮೆಲ್ಲ ಇಣುಕಿ ನೋಡುವವು.

ಪಕ್ಕದ ಮನೆ ಅಕ್ಕಮ್ಮ ಯಾವಾಗಲೂ ಜಾನಕಿಗೆ ಧೈರ್ಯ ತುಂಬುವಳು. ನೀನು ಹೀಗೆ ಹೆದರಬಾರದು - ನೀನೊಂದು ದಿನ ತಿರುಗಿ ನಿಂತರೆ ಅಂದೇ ಎಲ್ಲವೂ ಸಮಾಪ್ತಿಯಾಗುತ್ತದೆ. ಧೈರ್ಯ ತಂದುಕೋ ಅನ್ನುವಳು.

ಈ ಸಲ ಜಾನಕಿ ಆ ಧೈರ್ಯ ಮಾಡಿಯೇ ಮುಖ ಸಿಂಡರಿಸಿಕೊಂಡು ಕೂತಿದ್ದಳು.

- ಜಯಶ್ರೀ

ಬಲವಂತವಾಗಿ ಹುಡುಗಿಯರನ್ನು ವೇಶ್ಯಾವಾಟಿಕೆಗೆ ತಳ್ಳುವ ಕುಡುಕ ತಂದೆಯರು

ನಗರದಲ್ಲಿ - ಅಪರಾಧ, ಬಲವಂತದ ವೇಶ್ಯಾವಾಟಿಕೆಗೆ ಕುಡಿತಕ್ಕೆ ಸಂಬಂಧಪಟ್ಟ ಹಿಂಸೆ ಮತ್ತು ಮದುವೆಯಿಲ್ಲದ ತಾಯಂದಿರು ಕಾರಣವೆಂದು ತಿಳಿದು ಬಂದಿದೆ. ನಗರದ 12 ಸ್ಲಂನ ಮಹಿಳೆಯರು ತಮ್ಮ ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸಿಕೊಡಿ ಎಂದು ಸ್ವಯಂ ಸೇವಾ ಸಂಸ್ಥೆಗಳನ್ನು ಕೇಳಿಕೊಂಡಿದ್ದಾರೆ. ಅನೇಕ ಹೆಣ್ಣು ಮಕ್ಕಳ ಅಪಹರಣ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಕಳ್ಳತನಕ್ಕೆ, ಕುಡಿತಕ್ಕೆ ಇಳಿಯುತ್ತಿರುವುದು ಅನೇಕ ತಾಯಂದಿರ ಚಿಂತೆಗೆ ಕಾರಣವಾಗಿದೆ. ತಮ್ಮ ಮಕ್ಕಳಿಗೆ ಕೆಲಸ ಕೊಡಿಸಲು ಅಥವಾ ಶಾಲೆಗೆ ಸೇರಿಸಲು ಸಹಾಯ ಮಾಡಿ ಎಂದು ಸ್ವಯಂ ಸೇವಾಸಂಸ್ಥೆಗಳನ್ನು ಕೇಳಿದ್ದಾರೆ. ಬೈಯಪ್ಪನಹಳ್ಳಿ, ಚಾಮುಂಡಿನಗರ, ಮಂಜುನಾಥನಗರ, ಕಾವಲ್‌ಭೈರಸಂದ್ರ, ಕಾಮರಾಜ್‌ನಗರ, ದೊರೆಸಾನಿಪಾಳ್ಯ, ಕೊಡಿ ಚಿಕ್ಕನಹಳ್ಳಿ, ಭುವನೇಶ್ವರಿ ನಗರ, ಪಾಪಣ್ಣ ಪಾಳ್ಯ, ಸುಣ್ಣದ ಗೂಡು ಮತ್ತು ಕೋರಮಂಗಲದಲ್ಲಿನ ಸ್ಲಂಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಿದ್ದು, ಅವರಲ್ಲಿ ಹೆಚ್ಚಿನವರು ಒಂಟಿಯಾಗಿ ಮಕ್ಕಳನ್ನು ಸಾಕುವ ಜವಾಬ್ದಾರಿ ಹೊತ್ತವರು. ಸ್ವಯಂ ಸೇವಾ ಸಂಸ್ಥೆಗಳಿಗೆ ಮನವಿ ಮಾಡಿಕೊಂಡಿರುವ ಈ ತಾಯಂದಿರು 'ಇಲ್ಲಿನ ವಾತಾವರಣ ತುಂಬಾ ಅಪಾಯಕಾರಿ ಗಂಡಸರು ಕೆಟ್ಟ ಭಾಷೆಯಲ್ಲಿ ಬಯ್ಯುತ್ತಾರೆ, ಕತ್ತಲಾದ ಮೇಲೆ ಹೆಣ್ಣು ಮಕ್ಕಳು ಈಚೆ ಬರುವುದೇ ಸುರಕ್ಷಿತವಲ್ಲ' ಎನ್ನುತ್ತಾರೆ. ಹೆಣ್ಣು ಮಕ್ಕಳು ಶಾಲೆ ಬಿಟ್ಟು ಮನೆಯಲ್ಲಿ ಕೆಲಸ ಮಾಡಲಿ ಎಂದೆ ಎಲ್ಲ ಅಪ್ಪಂದಿರು ಹೇಳುತ್ತಾರೆ. 15 ವರ್ಷಕ್ಕೆಲ್ಲ ಮದುವೆ ಮಾಡಿಬಿಡುತ್ತಾರೆ. ನಮ್ಮ ಹೆಣ್ಣುಮಕ್ಕಳಿಗೆ ರಕ್ಷಣೆ, ಶಿಕ್ಷಣದ ಅಗತ್ಯವಿದೆ. ಸಾಮಾಜಿಕ ಕಾರ್ಯಕರ್ತರಷ್ಟೆ ನಮಗೆ ಸಹಾಯ ಮಾಡಲು ಸಾಧ್ಯ ಎನ್ನುತ್ತಾರೆ. ಚಾಮುಂಡಿನಗರದ ಚಂದಾ.

ಜನೋದಯ ಎಂಬ ಸ್ವಯಂಸೇವಾ ಸಂಸ್ಥೆಯು ಈ ಸ್ಲಂಗಳಲ್ಲಿ ಕೆಲಸ ಮಾಡುತ್ತಿದೆ. ಸಂಸ್ಥೆಯು ಸುಮಾರು 55 ಹುಡುಗಿಯರಿಗೆ ವಿವಿಧೆಡೆ ಶಾಲೆ, ಆಶ್ರಯ ತಾಣ ಹುಡುಕಿಕೊಟ್ಟಿದೆ. ದೊಡ್ಡ ಹುಡುಗಿಯರು ತಾವೇ ಸಹಾಯ ಹುಡುಕಿಕೊಂಡು ನಮ್ಮ ಬಳಿ ಬರುತ್ತಾರೆ. ಅವರಲ್ಲಿ ಶೇ. 25ರಷ್ಟು ಹುಡುಗಿಯರು ಶಿಕ್ಷಣವಿಲ್ಲದ ಕಾರಣ ಸಹಾಯಕರಾಗೊ, ಅಪ್ರೆಂಟಿಸ್ ಆಗೋ ಕೆಲಸ ಮಾಡುತ್ತಾರೆ. ಅವರೆಲ್ಲ ಸಣ್ಣ ಮಕ್ಕಳನ್ನಷ್ಟೇ ಶಾಲೆಗೆ ಕಳಿಸುವ ಕುಟುಂಬದಿಂದ ಬಂದಂತಹವರು. ಕಲಿಯಲು ತುಂಬಾ ಆಸಕ್ತಿ ತೋರಿಸುತ್ತಾರೆ ಎಂದು ಸಂಸ್ಥೆಯ ಆಯೇಷಾ ಅವರು ಹೇಳುತ್ತಾರೆ.

ಐದು ವಯಸ್ಸಿನ ಮಕ್ಕಳನ್ನೂ ಸಹ ತಂದೆ-ತಾಯಿಯರೊಂದಿಗೆ ಕಟ್ಟಡ ಕಟ್ಟುವ ಕೆಲಸ ಮಾಡಲು ಬಲವಂತ ಮಾಡಲಾಗುತ್ತದೆ. ಬೈಯಪ್ಪನಹಳ್ಳಿಯ ಮಾಲಾ "ನನ್ನ ಕುಡುಕ ಗಂಡ ನನ್ನ ಮಗಳನ್ನು ಯಾವಾಗಲು ಬಯ್ಯುತ್ತಾನೆ. ಮಗನೆಂದರೆ ಮಾತ್ರ ಅವನಿಗಿಷ್ಟ, ಆದ್ದರಿಂದ ಅವನನ್ನು ಸ್ಕೂಲಿಗೆ ಕಳಿಸುತ್ತಾನೆ, ಮಗಳನ್ನು ಶಾಲೆಗೆ ಕಳಿಸುವುದಕ್ಕೆ ದುಡ್ಡು ದಂಡವೆನ್ನುತ್ತಾನೆ. ಸುತ್ತಮುತ್ತಲಿನ ಎಷ್ಟೋ ಹುಡುಗಿಯರು ಕುಟುಂಬದ ಬಲವಂತದಿಂದಾಗಿ ವೇಶ್ಯಾವಾಟಿಕೆಗೆ ಇಳಿದಿದ್ದರೆ. ನನ್ನ ಮಗಳಿಗೆ ಒಳ್ಳೆ ಜೀವನ ಸಿಗಬೇಕು" ಎನ್ನುತ್ತಾರೆ.

ಜನೋದಯ ಸಂಸ್ಥೆ ಹೇಳುವಂತೆ ಕೋರಮಂಗಲ, ಬೈಯಪ್ಪನಹಳ್ಳಿ, ಭುವನೇಶ್ವರಿ ಮತ್ತು ಸುಣ್ಣದಗೂಡು ಸ್ಲಂನಿಂದಲೆ ಸಹಾಯಕ್ಕಾಗಿ ಹೆಚ್ಚಿನ ಕರೆ ಬರುವುದು. ಪ್ರತಿ 10 ಜನರಲ್ಲಿ ಇಬ್ಬರು ತಾಯಂದಿರು ತಮ್ಮ ಮಕ್ಕಳು ಈ ವಾತಾವರಣದಿಂದ ಹೊರಬಂದು ಉತ್ತಮ ಜೀವನ ನಡೆಸಬೇಕೆಂದು ಬಯಸುತ್ತಾರೆ.

ಸಹಾಯಕ್ಕಾಗಿ ತಂದೆಯಂದಿರು ಬರುವುದನ್ನು ನಾವು ಕಂಡೇ ಇಲ್ಲ. ಅನೇಕ ಕುಟುಂಬಗಳಲ್ಲಿ ಬಲವಂತವಾಗಿ ವೇಶ್ಯಾವಾಟಿಕೆಗೆ ಹೆಣ್ಣು ಮಕ್ಕಳನ್ನು ತಳ್ಳುವವರು ತಂದೆಯರೇ ಎನ್ನುತ್ತಾರೆ 'ಮುಕ್ತಿ' ಸೇವಾಸಂಸ್ಥೆಯ ರಂಜನಾ ಅವರು. ಆ ಸಂಸ್ಥೆ 33 ಹುಡುಗಿಯರಿಗೆ ಮನೆ, ಉದ್ಯೋಗ ದೊರಕಿಸಿಕೊಟ್ಟಿದೆ. ಹೆಣ್ಣು ಮಕ್ಕಳಿಗಾಗಿ ತಾಯಂದಿರು ಕಾಳಜಿ ತೋರಿಸುವುದನ್ನು ನೋಡಿ ನನಗೆ ಸಂತೋಷವಾಗಿದೆ ಎನ್ನುತ್ತಾರೆ ಕೋರಮಂಗಲ ನಿವಾಸಿ ಗಿರಿಜ.

ಕೃಪೆ: ಟೈಮ್ಸ್ ಆಫ್ ಇಂಡಿಯಾ

ಕರಪತ್ರ ಆಂದೋಲನ - ಒಂದು ವರದಿ

ಲೈಂಗಿಕ ಕಿರುಕುಳ ಕುರಿತಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪನ್ನು ಆಧರಿಸಿ ಕರಪತ್ರವನ್ನು ಪ್ರಕಟಿಸಿ ಹಂಚುವ ಕಾರ್ಯಕ್ರಮವನ್ನು ಮಾನಸ ಹಮ್ಮಿಕೊಂಡಿದೆ. ಅದರ ಅಂಗವಾಗಿ ದಿನಾಂಕ 23.5.98 ಹಾಗು ದಿನಾಂಕ 30.5.98ರಂದು ಯಲಚೇನಹಳ್ಳಿ (ಕನಕಪುರ ರಸ್ತೆ) ಸುತ್ತಮುತ್ತಲಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಹೆಂಗಸರಿಗೆ ಕರಪತ್ರವನ್ನು ಹಂಚಲಾಯಿತು. ದಿನಾಂಕ 23.5.98ರಂದು ಮಾನಸ ಬಳಗದವರೆಲ್ಲ ಯಲಚೇನಹಳ್ಳಿಯಲ್ಲಿರುವ ಮಾನಸದ ಸದಸ್ಯೆ ಪುಷ್ಪಾ ಅವರ ಮನೆಯಲ್ಲಿ ಸೇರಿದೆವು. ಅವರ ಸ್ನೇಹಿತೆ ಜಯಲಕ್ಷ್ಮಿಯವರು ಅಲ್ಲಿನ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದು ಕಾರ್ಖಾನೆಯ ಕಾರ್ಮಿಕ ಸಂಘಟನೆಯಲ್ಲೂ ಸಕ್ರೀಯವಾಗಿ ಕೆಲಸ ಮಾಡುತ್ತಿದ್ದಾಳೆ. ಅವರ ಮೂಲಕ T.V.S. ಬಿಡಿ ಭಾಗಗಳನ್ನು ತಯಾರಿಸುವ ಕಾರ್ಖಾನೆ, ಟ್ಯೂಬ್‌ಲೈಟಿನ ಬಿಡಿ ಭಾಗಗಳನ್ನು ತಯಾರಿಸುವ ಕಾರ್ಖಾನೆ, ಬಾಟ್ಲಿಗಳ ಮುಚ್ಚಳಗಳೊಳಗಿನ ಕಾರ್ಕ್ ತಯಾರಿಸುವ ಕಾರ್ಖಾನೆಗಳಲ್ಲಿ ಕರಪತ್ರವನ್ನು ಹಂಚಲಾಯ್ತು.

ಫ್ಯಾಕ್ಟರಿ ಬಿಡುವ ಹೊತ್ತಿಗೆ ಗೇಟಿನ ಬಳಿಯಲ್ಲಿ ಬರುವ ಹೆಂಗಸರಿಗೆ ಕರಪತ್ರವನ್ನು ಹಂಚಲಾಯ್ತು. ಫ್ಯಾಕ್ಟರಿ ಬಿಟ್ಟ ಕೂಡಲೆ ಬಾಣ ಬಿಟ್ಟಂತೆ ಬಸ್ಸಿಗಾಗಿ ಓಡುವ ಮಹಿಳೆಯರನ್ನು ನಿಲ್ಲಿಸಿ ಮಾತನಾಡಿಸುವುದು ಸಾಧ್ಯವಾಗಲಿಲ್ಲ. 5-6 ಜನ ಸದಸ್ಯೆಯರು 5-6 ಕಡೆ ಮಹಿಳೆಯರ ಹಿಂದೆ ಓಡಿ ಕರಪತ್ರ ಅವರ ಕೈಯಲ್ಲಿ ತುರುಕಿದೆವು. ಕೆಲಸ ಬಿಟ್ಟ ಕೂಡಲೇ ಬಸ್ಸಿಗೆ ಓಡುವ ತುರ್ತು ತಿಳಿದ ನಾವೂ ಕೂಡ ನಿಲ್ಲಿಸಿ ಮಾತಾಡುವ ಕೆಲಸ ಕೈ ಬಿಟ್ಟೆವು. ಓಡುವ ತರಾತುರಿಯಲ್ಲೂ ಒಂದೆರಡು ಸೆಕೆಂಡ್ ಕರಪತ್ರದಲ್ಲಿರುವುದನ್ನು ಕುರಿತು ಆಸಕ್ತಿ ತೋರಿದವರಿಗೆ ಹೇಳಿದೆವು. 12-14 ವಯಸ್ಸಿನ ಹುಡುಗಿಯರು ಕೂಡ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಅತಿ ಕಡಿಮೆ ಸಂಬಳಕ್ಕೆ 8ಗಂಟೆಗಿಂತಲೂ ಹೆಚ್ಚು ದುಡಿಯುವ ಮಹಿಳೆಯರಿಗೆ ಫ್ಯಾಕ್ಟರಿಯಲ್ಲಿ ಕಾರ್ಮಿಕ ಸಂಘಟನೆಯಿಲ್ಲ. ಕರಪತ್ರ ತೆಗೆದುಕೊಳ್ಳಲೂ ಏನೋ ಎಂತೋ ಎಂಬ ಹಿಂಜರಿಕೆ. ಕರಪತ್ರ ತೆಗೆದುಕೊಂಡವರೆಲ್ಲ ಓದಲು ಆಸಕ್ತಿ ತೋರಿಸಿದರು, ಕೇಳಿ ತಿಳಿದುಕೊಂಡು ಹೌದೆಂದು ತಲೆದೂಗಿದರು. ಕೆಲ ಹುಡುಗಿಯರು ಓದಿ ನಮಗನಿಸಿದ್ದನ್ನು ಬರೆಯುವುದಾಗಿ ಹೇಳಿದರು. ಕನಕಪುರ ರಸ್ತೆಯಲ್ಲಿ ಇನ್ನೂ ಅನೇಕ ಫ್ಯಾಕ್ಟರಿಗಳಿರುವುದರಿಂದ ಮುಂದಿನ ಶನಿವಾರವೂ ಬರಲು ತೀರ್ಮಾನಿಸಲಾಯ್ತು.

ಮತ್ತೆ 30.6.98ರಂದು ಪುಷ್ಪಾ ಅವರ ಮನೆಯಲ್ಲೇ ಎಲ್ಲರೂ ಸೇರಿದೆವು. T.V.S. ಬಿಡಿ ಭಾಗ ಮಾಡುವ ಫ್ಯಾಕ್ಟರಿಯಲ್ಲಿ ಎಲ್ಲಾ ಮಹಿಳೆಯರನ್ನು ಸೇರಿಸುವುದಾಗಿ ಒಂದೈದು ನಿಮಿಷ ಮಾನಸ ಬಳಗದವರು ಮಾತನಾಡಹುದೆಂದು ಅಲ್ಲಿನ ಕಾರ್ಮಿಕರೊಬ್ಬರು ಹೇಳಿದ್ದರು. ಕೊಂಚ ಮೊದಲೇ ಬರಲು ಹೇಳಿದ್ದರಿಂದ 4.50ರ ಹೊತ್ತಿಗೆ ಫ್ಯಾಕ್ಟರಿ ಬಳಿ ಹೋದೆವು. ಮಾತನಾಡುವ ಬದಲು ದುಡಿವ ಮಹಿಳೆಯರನ್ನು ಕುರಿತ ಹಾಡನ್ನು ಹೇಳಬೇಕೆಂದುಕೊಂಡಿದ್ದೆವು. ಎಂದಿನಂತೆ ಮಹಿಳೆಯರು ಬಸ್‌ಗೆ ಓಡುವ ತರಾತುರಿಯಲ್ಲಿದ್ದುದರಿಂದ ಮತ್ತು ಸಭೆ ಸೇರಿಸಿ ಮಾತನಾಡುವುದರಿಂದ ಅವರಿಗೆ ತೊಂದರೆಯಾಗಬಹುದೆಂದು ಕರಪತ್ರವನ್ನಷ್ಟೇ ಎಲ್ಲರಿಗೂ ಹಂಚಿದೆವು. ಅಲ್ಲಿಂದ ಕೋಣನಕುಂಟೆಯಲ್ಲಿ ಖೋಡೆ ಫ್ಯಾಕ್ಟರಿ, ಗ್ಲಾಸ್ ಫ್ಯಾಕ್ಟರಿ, ಉಪ್ಪಿನಕಾಯಿ ಫ್ಯಾಕ್ಟರಿಯಲ್ಲಿ ಕರಪತ್ರ ಹಂಚಲು ಹೋದೆವು. ಗ್ಲಾಸ್ ಫ್ಯಾಕ್ಟರಿ ಆಗಲೆ ಬಿಟ್ಟಾಗಿದುದರಿಂದ ಖೋಡೆ ಮತ್ತು ಉಪ್ಪಿನಕಾಯಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಕರಪತ್ರ ಹಂಚಲಾಯ್ತು. ಫ್ಯಾಕ್ಟರಿಗಳು ಬಿಟ್ಟ ಮೇಲೆ ಬಸ್ ಹತ್ತಲು ಎಲ್ಲರೂ ಮೇನ್ ರೋಡಿಗೆ ಬರುವುದರಿಂದ ಮೇನ್ ರೋಡಿನಲ್ಲಿ ಅಲ್ಲಲ್ಲಿ ನಿಂತು ಮಹಿಳೆಯರು ಬಂದಾಗಲೆಲ್ಲ ಹಂಚಲಾಯ್ತು. ಅವರ ಜೊತೆಯಲ್ಲೆ ನಡೆಯುತ್ತ ನಡೆಯುತ್ತ ಕರಪತ್ರ ಕುರಿತು ಹೇಳುವುದು ಮತ್ತೆ ಹಿಂದೆ ಬಂದು ಹಿಂದೆ ಬರುತ್ತಿದ್ದ ಗುಂಪಿನೊಂದಿಗೆ ನಡೆಯುತ್ತಾ ಹೋಗಿ ಕರಪತ್ರದ ವಿಷಯ ಹೇಳುವುದು. ಹೀಗೆ ಸುಮಾರು 1 ಕಿ.ಮೀ.ಗಿಂತಲೂ ಹೆಚ್ಚು ದೂರ ಮೇನ್ ರೋಡಿನಲ್ಲಿ ನಡೆಯುತ್ತಾ ರಸ್ತೆ ಎರಡೂ ಬದಿಯಲ್ಲಿ ಕರಪತ್ರ ಹಂಚಿದ್ದು ನೆನಪಿನಲ್ಲಿ ಉಳಿಯುವಂತದ್ದು.

ಮಹಿಳೆಯರು ಆಸಕ್ತಿಯಿಂದ ಕೇಳಿದ್ದು, ಓದಲು ಬಾರದ ಮಹಿಳೆಯರು ಓದಿ ಹೇಳಲು ಕೇಳಿದ್ದು, ಪುಟ್ಟ ಹುಡುಗಿಯರು ಕೇಳಿದ ಮೇಲೆ ಹೌದು ಆಂಟಿ ನಮ್ ಫ್ಯಾಕ್ಟ್ರಿಲೂ ಗಂಡಸ್ರು ಪೋಲಿಯಾಗಿ ಆಡ್ತಾರೆ, ಅಂತ ತಲೆ ಆಡಿಸಿದ್ದು, ಒಳ್ಳೆ ಕೆಲ್ಸ ಮಾಡ್ತಾ ಇದೀರಿ, ಪೋಲಿ ಮುಂಡೆ ಮಕ್ಳಿಗೆ ಬುದ್ದಿ ಕಲ್ಸಿರೆ

ಹೆಣ್ ಮಕ್ಳು ನೆಮ್ದಿಯಾಗಿ ಕೆಲ್ಸ ಮಾಡ್‌ಬೋದು ಅಂತ ಕೆಲವರು ಹೇಳಿದ್ದು ಇವೆಲ್ಲ ಕೆಲಸ ಮಾಡುವ ಸ್ಥಳಗಳ ಸುರಕ್ಷಿತತೆಯ ಅಗತ್ಯ ಎಷ್ಟಿದೆ ಎಂಬುದನ್ನು ತೋರಿಸುತ್ತಿತ್ತು. ಸಣ್ಣ ಹುಡುಗಿಯರಿಂದ ಹಿಡಿದು 50 ವರ್ಷಕ್ಕಿಂತಲೂ ದೊಡ್ಡವರು ಅಲ್ಲಿನ ಸುತ್ತಮುತ್ತಲಿನ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ. ಸಂಸಾರ ಸಾಗಿಸಲು ದುಡಿಯಲೇಬೇಕಾದ ಅನಿವಾರ್ಯತೆ, ಕತ್ತೆ ದುಡಿತವಾದರೂ ಸರಿಯೇ 500/- ರೂ. ಸಿಗುತ್ತಲ್ಲ ಮಕ್ಕಳ ಸ್ಕೂಲಿನ ಖರ್ಚಾದರೂ ತೂಗಿಸಬಹುದಲ್ಲ ಎನ್ನುವ ಸ್ಥಿತಿ. ಎಷ್ಟೋ ಫ್ಯಾಕ್ಟರಿಗಳಲ್ಲಿ ಕಾರ್ಮಿಕ ಸಂಘಟನೆಗಳಿಲ್ಲ. ಕರಪತ್ರವೇನೋ ಹಂಚಾಯ್ತು. ಸುಪ್ರೀಂಕೋರ್ಟಿನ ತೀರ್ಪಿನ ಮೇಲೆ ಲೈಂಗಿಕ ಕಿರುಕುಳದ ವಿರುದ್ಧ ಯಾರಾದರು ಮೊಕದ್ದಮೆ ಹೂಡುವರೆ? ಈ ತೀರ್ಪು, ಕಾನೂನು, ಕಾರ್ಮಿಕ ಸಂಘಟನೆ, ಇತರೆ ಸೌಲಭ್ಯಗಳು ವ್ಯವಸ್ಥಿತವಾದ ಉದ್ದಿಮೆ, ಸೇವಾ ಕ್ಷೇತ್ರಗಳಿಗಷ್ಟೆ ಸೀಮಿತವೇನೋ ಎಂಬ ದುಗುಡ ಎಲ್ಲರ ಮನಸ್ಸಿನಲ್ಲಿತ್ತು. ಆದರೆ ವ್ಯವಸ್ಥಿತ, ಸುರಕ್ಷಿತ ಬ್ಯಾಂಕು, LICಗಳಲ್ಲಿ ಕೆಲಸ ಮಾಡುವ ಮಹಿಳೆಯರು ಕರಪತ್ರಕ್ಕೆ ತೋರಿಸಿದ ಪ್ರತಿಕ್ರಿಯೆಗೂ ಈ ಸಣ್ಣ ಪುಟ್ಟ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಮಹಿಳೆಯರು ತೋರಿದ ಆಸಕ್ತಿಗೂ ಅಜಗಜಾಂತರ ವ್ಯತ್ಯಾಸವಿತ್ತು.

ಫ್ಯಾಕ್ಟರಿಗಳಲ್ಲಿ ಕರಪತ್ರ ಹಂಚುವುದನ್ನು ತಮ್ಮ ಏರಿಯಾದಲ್ಲಿ ಪ್ರಾರಂಭಿಸಲು ಸೂಚಿಸಿ, ಅದಕ್ಕೆ ಪೂರಕವಾದ ಏರ್ಪಾಡುಗಳನ್ನು ಮಾಡಿ, ರುಚಿಯಾದ ಅಡುಗೆ ಮಾಡಿ ಪ್ರೀತಿಯಿಂದ ಬಡಿಸಿ, ಕರಪತ್ರ ಹಂಚುವುದರಲ್ಲೂ ಸಕ್ರೀಯವಾಗಿ ದುಡಿದು ಕೊಂಚ ಜಡಗೊಂಡಿದ್ದ ಮಾನಸ ಬಳಗವನ್ನು Activate ಮಾಡಿದ Credit ಪುಷ್ಪಾರಿಗೆ ಸಲ್ಲಬೇಕು. ●

ನೀನಾಗು ಧರೆಗೆ ದೀವಿಗೆ

ಓ ಹೆಣ್ಣೇ
ನಿನ್ನ ನೆನಪೇ
ತರುವುದು
ನೊಂದ ನೆನಪುಗಳ
ಸರಮಾಲೆಯನ್ನು
ವರದಕ್ಷಿಣೆಯ ಭೂತ ಹಿಡಿದವರ
ದನದಂತೆ ಬಡೆಯುವವರ
ಬೆಂಕಿಗಾಹುತಿ ಮಾಡುವವರ
ಬಲಾತ್ಕಾರದಿ ಮಾನವ
ಕಳೆಯುವವರ ಸೊಕ್ಕನ್ನು ಅಡಗಿಸಲು
ಓ ಹೆಣ್ಣೇ ನೀ
ಏಳಬೇಕು ದಂಗೆ.
ನಿದ್ದೆ ಮಾಡುವ ಹೆಣ್ಣು ಮಕ್ಕಳ ಎಚ್ಚರಗೊಳಿಸಲು
ನೀನಾಗಬೇಕು
ಈ ಧರೆಗೆ ದೀವಿಗೆ

- ಪುಷ್ಪಾ

ಗೃಹಕಾರ್ಮಿಕರು

ಇಂದಿನ ಆಧುನಿಕ ಪ್ರಪಂಚದಲ್ಲಿ ಮನೆಗೆಲಸದವರ ಅವಶ್ಯಕತೆ ದಿನೇ ದಿನೇ ಹೆಚ್ಚುತ್ತಿದೆ. ಯಂತ್ರಗಳು ಈ ದಿಸೆಯಲ್ಲಿ ಕೆಲಮಟ್ಟಿಗೆ ಮನೆಗೆಲಸದವಳ ಕೊರತೆಯನ್ನು ನಿವಾರಿಸಬಹುದಾದರೂ ಮನೆಗೆಲಸದ ಹೆಂಗಸಿನ ಅವಶ್ಯಕತೆ ಇದ್ದೇ ಇದೆ. ಒಬ್ಬ ಗೃಹಿಣಿ ಮನೆಗೆಲಸದ ಜೊತೆಗೆ ತನ್ನ ದೈನಂದಿನ ಕೆಲಸಗಳಾದ ಅಡುಗೆ ಕೆಲಸ, ಅತಿಥಿಗಳನ್ನು ಸತ್ಕರಿಸುವುದು ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ಸಮರ್ಥವಾಗಿ ಪಾಲ್ಗೊಳ್ಳಲಾರಳು. ಗಂಡ-ಹೆಂಡತಿ ಇಬ್ಬರೂ ಮನೆಯ ಹೊರಗೆ ಹೋಗಿ ಕೆಲಸ ಮಾಡುತ್ತಿದ್ದರಂತೂ, ಮನೆಗೆಲಸದವಳು ಅತ್ಯವಶ್ಯ. ಗೃಹಿಣಿಯರು ಮನೆಗೆಲಸ ಮಾಡುವಂಥ ಮಾತಂತೂ ದೂರ ಉಳಿಯಿತು. ಅಡುಗೆ ಕೆಲಸದಲ್ಲಿಯೂ ಮನೆಗೆಲಸದವಳು ಸಹಾಯ ಮಾಡಲಿ. ಒಂದಿಷ್ಟು ಸಂಬಳ ಹೆಚ್ಚಿಸಿದರಾಯಿತು ಎಂಬ ಮನೋಭಾವನೆ ಬೆಳೆಯುತ್ತಿದೆ.

ದುಡಿಯುವ ಮಹಿಳೆ ಎಂದಾಕ್ಷಣ ಕಛೇರಿ-ಕಾರ್ಖಾನೆಗಳಿಗೆ ಹೋಗುವ ಮಧ್ಯಮ ವರ್ಗದ ಮಹಿಳೆಯರನ್ನು ಕಣ್ಮುಂದೆ ತಂದುಕೊಳ್ಳುವುದು ಅಪೂರ್ಣ ಚಿತ್ರವಷ್ಟೆ. ಮಧ್ಯಮ ವರ್ಗ ಹಾಗೂ ಮೇಲುವರ್ಗದ ಮಹಿಳೆಯರಿಗೆ ಉದ್ಯೋಗ ಐಚ್ಛಿಕವಾಗಿರಬಹುದು. ಆದರೆ ಕೆಳವರ್ಗದ ಮಹಿಳೆಯರಿಗೆ ಉದ್ಯೋಗ ಅನಿವಾರ್ಯ. ಹಳ್ಳಿಗಳಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕ ಮಹಿಳೆಯರಿಂದ ಹಿಡಿದು ಪಟ್ಟಣದಲ್ಲಿ ಮನೆಗೆಲಸ ಮಾಡುವ, ಚಿಕ್ಕ ಪುಟ್ಟ ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರು, ಬೀಡಿ ಕಟ್ಟುವುದು, ಅಗರಬತ್ತಿ ಹೊಸೆಯುವುದು, ಕಟ್ಟಡ ನಿರ್ಮಾಣದ ಕೆಲಸ ಇತ್ಯಾದಿ ಕಡಿಮೆ ಕೂಲಿ ತರುವ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರಿಗೆ ತಮ್ಮ ಸಂಸಾರಗಳನ್ನು ಸಂಭಾಳಿಸಲು ಈ ರೀತಿಯ ಉದ್ಯೋಗಗಳು ಅನಿವಾರ್ಯವೆನಿಸಿವೆ.

ಮಹಿಳೆಯರು ಇಂಥ ಅಸಂಘಟಿತ ಕ್ಷೇತ್ರಗಳಲ್ಲೇ ಹೆಚ್ಚಾಗಿ ದುಡಿಯಲು ಅನೇಕ ಕಾರಣಗಳಿವೆ. ಅವುಗಳು ಶಿಕ್ಷಣದ ಕೊರತೆ, ಅರಿವಿಲ್ಲದಿರುವುದು, ತರಬೇತಿಯ ಕೊರತೆ, ಸ್ವಾತಂತ್ರ್ಯವಿಲ್ಲದಿರುವುದು ಸಾಮಾಜಿಕ ಕಾರಣಗಳಾದ ಪಿತೃ ಪ್ರಾಧಾನ್ಯತೆ, ಕೀಳರಿಮೆ ಮುಂತಾದುವು. ಶೇ. 80ರಷ್ಟು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆಯರು ಹೆಚ್ಚಾಗಿ ಮನೆಗೆಲಸವನ್ನು ಆರಿಸಿಕೊಂಡಿರುತ್ತಾರೆ. ಪುರುಷರು ಈ ಕ್ಷೇತ್ರದಲ್ಲಿ ಇಲ್ಲವೆಂದೇ ಹೇಳಬೇಕು. ಇದ್ದರೂ ಬರಿಯ ಅಡುಗೆ ಕೆಲಸದವರಾಗಿ ಇದ್ದುಬಿಡುತ್ತಾರೆ.

ಆಧುನಿಕ ಪ್ರಪಂಚದ ಆವಿಷ್ಕಾರಗಳಾದ ಬಟ್ಟೆ ಒಗೆಯುವ ಯಂತ್ರ, ಪಾತ್ರೆ ತೊಳೆಯುವ, ಮನೆ ಗುಡಿಸುವ ಯಂತ್ರಗಳು, ಮನೆಗೆಲಸದವರ ಬೇಡಿಕೆಯನ್ನು ಕುಗ್ಗಿಸಿಲ್ಲ. ಆ ಯಂತ್ರಗಳು ಇದ್ದರೂ ವಿದ್ಯುಚ್ಛಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಆ ಯಂತ್ರಗಳ ಬಳಕೆ ಕಡಿಮೆ ಮಾಡಿ, ಮನೆಗೆಲಸದವರಿಗೇ ಮೊರೆ ಹೋಗುತ್ತಾರೆ. ಹಾಗೂ ಯಂತ್ರಗಳ ಬಳಕೆ ವಾರಕ್ಕೊಮ್ಮೆಯೋ, ಹದಿನೈದು ದಿನಕ್ಕೊಮ್ಮೆಯೋ ಉಪಯೋಗಿಸುತ್ತಾರೆ. ಈ ಯಂತ್ರಗಳನ್ನು ಸಾಮಾನ್ಯವಾಗಿ ಮನೆಗೆಲಸದವರಿಗೆ ಉಪಯೋಗಿಸಲು ಕೊಡುವುದಿಲ್ಲ.

ಸಾಮಾನ್ಯವಾಗಿ ಮನೆಗೆಲಸದ ಹೆಂಗಸರು ಬಾಡಿಗೆ ಮನೆಗಳಲ್ಲಿ ಅಥವಾ ಖಾಲಿ ಇರುವ ಜಾಗಗಳಲ್ಲಿ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡಿರುತ್ತಾರೆ. ಆ ಜಾಗದ ಮಾಲೀಕರು ಬಂದು ಕೇಳಿದಾಗ ಗುಡಿಸಲನ್ನು ಕೆಡವಬೇಕಾಗುತ್ತದೆ. ಹಾಗೂ ಅಂಥಹುದೇ ಜಾಗ ಹುಡುಕಬೇಕಾಗುತ್ತದೆ. ಸಾಮಾನ್ಯವಾಗಿ ಮನೆಗೆಲಸದ ಮಹಿಳೆಯರು ಹಳ್ಳಿಯಿಂದ ಬಂದವರಾಗಿರುತ್ತಾರೆ. ಹಳ್ಳಿಗಳಲ್ಲಿ ಮನೆಗೆಲಸದವರ ಆವಶ್ಯಕತೆ ಇಲ್ಲದಿರುವುದರಿಂದ ಹಾಗೂ ಈ ಹೆಂಗಸರಿಗೆ ತಮ್ಮದೇ ಆದ ಹೊಲವೂ ಇಲ್ಲದಿರುವುದರಿಂದ ಪಟ್ಟಣಗಳಿಗೆ, ಕೆಲಸ ಹುಡುಕಿಕೊಂಡು ಬರುತ್ತಾರೆ. ಆಗ ಅವರಿಗೆ ಯಾವ ತೊಂದರೆಯೂ ಇಲ್ಲದೆ ದೊರಕುವ ಕೆಲಸವೆಂದರೆ ಮನೆಗೆಲಸ. ಹೀಗಾಗಿ ಮನೆಗೆಲಸದಲ್ಲಿ ಹೆಂಗಸರನ್ನು ಹೆಚ್ಚಾಗಿ ಕಾಣಬಹುದಾಗಿದೆ. ಮನೆಗೆಲಸದ ಹೆಂಗಸರ ಜೀವನ ಕಷ್ಟವಾದುದು, ದಿನವಿಡೀ ದುಡಿದರೂ

ಅವಶದೆಂದು ಹೇಳಿಕೊಳ್ಳುವ ನಾಲ್ಕು ಕಾಸಿರುವುದಿಲ್ಲ. ಗುಡಿಸಲುಗಳನ್ನು ಹಾಕಿಕೊಂಡಿರುವವರಿಗೆ, ಮಳೆಗಾಲದಲ್ಲಿ ಗುಡಿಸಲು ಸೋರು ಸರಿ ಮಾಡಿಸಬೇಕು, ಅದಕ್ಕೆ ತಕ್ಕ ಬಂದೋಬಸ್ತು ಮಾಡಬೇಕು. ನೀರು ಮತ್ತು ವಿದ್ಯುಚ್ಛಕ್ತಿಯಂತೂ ಇಲ್ಲವೇ ಇಲ್ಲ. ನೀರನ್ನು ಅಲ್ಲಿಯೇ ಅಕ್ಕಪಕ್ಕದಲ್ಲಿರುವ ಬೋರ್‌ವೆಲ್‌ಗಳಿಂದ ಹಿಡಿದು ತರುತ್ತಾರೆ. ರಾತ್ರಿ ಹೊತ್ತು ಸೀಮೆಎಣ್ಣೆ ದೀಪ ಉರಿಸುತ್ತಾರೆ. ಏನೂ ಖರ್ಚಿಲ್ಲವೆಂದರೂ ಗಂಡನಿಗೆ ಕುಡಿಯಲು ಕೊಡಬೇಕಾದ ಪರಿಸ್ಥಿತಿ ಇರುತ್ತದೆ.

ಸಾಮಾನ್ಯವಾಗಿ ಮನೆಗೆಲಸದ ಹೆಂಗಸರು, ಮನೆ ಗುಡಿಸಿ ಒರೆಸುವುದು, ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು, ಗಿಡಕ್ಕೆ ನೀರು ಹಾಕುವುದು, ಬಾಗಿಲಿಗೆ ನೀರು ಹಾಕುವುದು, ಅಂಗಡಿಯಿಂದ ಸಣ್ಣ ಪುಟ್ಟ ಸಾಮಾನು ತರುವುದು ಮುಂತಾದ ಕೆಲಸಗಳನ್ನು ಮಾಡುತ್ತಾರೆ.

ನಾಯಿಗಳನ್ನು ನೋಡಿಕೊಳ್ಳುವುದು, ಅಡುಗೆ ಕೆಲಸದಲ್ಲಿ ಸಹಾಯ ಮಾಡುವುದು, ಕೆಲವೊಮ್ಮೆ ಅಡುಗೆ ಮಾಡುವುದು, ಮಕ್ಕಳನ್ನು ನೋಡಿಕೊಳ್ಳುವುದು, ಮಕ್ಕಳನ್ನು ಶಾಲೆಗೆ ಬಿಟ್ಟು, ಕರೆದುಕೊಂಡು ಬರುವ ಕೆಲಸಗಳನ್ನೂ ಮಾಡುತ್ತಾರೆ. ಮನೆಗೆಲಸದ ಹೆಂಗಸರು ಸಾಮಾನ್ಯವಾಗಿ 3-4 ಮನೆಗಳಲ್ಲಿ ಮಾಡುತ್ತಾರೆ. ಒಂದು ಮನೆಗೆ ಒಂದು ಅಥವಾ ಒಂದೂವರೆ ಘಂಟೆ ಕೆಲಸ ಮಾಡುತ್ತಾರೆ. ಇತ್ತೀಚಿಗೆ ಮನೆಗೆಲಸದ ಹೆಂಗಸರು ಮಧ್ಯಾಹ್ನ ಅಥವಾ ಸಂಜೆ ವೇಳೆ ಮನೆಗೆಲಸಕ್ಕೆ ಒಪ್ಪುವುದಿಲ್ಲ. ಅಂದರೆ ಬೆಳಿಗ್ಗೆ ಹಾಗೂ ಮಧ್ಯಾಹ್ನವೂ ಕೆಲಸಕ್ಕೆ ಬರಲು ಒಪ್ಪುವುದಿಲ್ಲ. ಒಂದು ಮನೆಗೆ 150-250ವರೆಗೆ ಕೇಳುತ್ತಾರೆ. ಅದು ಅವರು ಆ ಮನೆಗೆ ಎಷ್ಟು ಹೊತ್ತು ಹಾಗೂ ಯಾವ ಯಾವ ಕೆಲಸ ಮಾಡುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ಮನೆಗೆಲಸದ ಮಹಿಳೆಯರ ಮತ್ತೊಂದು ವೈಶಿಷ್ಟ್ಯವೆಂದರೆ ತಾವು ಮನೆಗೆಲಸ ಮಾಡುವಲ್ಲಿ ಅವರು ಎಷ್ಟೇ ಸಂಬಳ ಕೊಟ್ಟರೂ ನಿತ್ಯ ತಮಗೆ ಊಟ ಅಥವಾ ತಿಂಡಿ ಕೊಡಬೇಕೆಂಬ ಬೇಡಿಕೆಯನ್ನು ಮುಂದಿಡುತ್ತಾರೆ. ಇದರಿಂದಾಗಿ ತಮ್ಮ ಮನೆಗಳಲ್ಲಿ ಅಡುಗೆ ಮಾಡುವ ಗೋಜಿಗೆ ಹೋಗದಿರಬಹುದು. ಖರ್ಚೂ ಉಳಿಯಿತು. ಎಲ್ಲಕ್ಕಿಂತ ಮುಖ್ಯವಾಗಿ ಕೊಂಚ ವಿಶ್ರಾಂತಿ ಪಡೆಯಬಹುದು. ಅವಶ್ಯಕತೆ ಇದ್ದಲ್ಲಿ ಮಾತ್ರ ತಮ್ಮ ಮನೆಗಳಲ್ಲಿ ಅಡುಗೆ ಮಾಡುತ್ತಾರೆ. ಇಲ್ಲದಿದ್ದರೆ ರಸ್ತೆ ಬದಿಯ ಪೆಟ್ಟಿಗೆ ಅಂಗಡಿಗಳಲ್ಲಿ ತಿನ್ನುತ್ತಾರೆ.

ಮನೆಗೆಲಸದ ಮಹಿಳೆಯರಿಗೆ ಓದಿನ ಮಹತ್ವ ತಿಳಿದಿದೆ. ತಮ್ಮ ಮಕ್ಕಳನ್ನು ಸಾಲ ಮಾಡಿಯಾದರೂ ಓದಿಸಲು ಸಿದ್ಧರಿರುತ್ತಾರೆ. ತಮ್ಮ ಮಕ್ಕಳು ತಮ್ಮ ಹಾಗೆ ಅವರಿವರ ಮನೆಯಲ್ಲಿ ಚಾಕರಿ ಮಾಡುವುದು ಬೇಡ; ತಿಂಗಳಿಗೆ ಒಂದಿಷ್ಟು ಸಂಬಳ ಬರುವಂತಾದರೆ ಅವರ ಜೀವನವೂ ಸುಗಮವಾಗುತ್ತದೆ ಎಂಬ ನಂಬಿಕೆ ಇವರದು. ಆದರೆ ಇವರು ಮಕ್ಕಳನ್ನು ಶಾಲೆಗೆ ಸೇರಿಸುವ ಹೊತ್ತಿಗೆ ಆ ಮಕ್ಕಳಿಗೆ 7-8ವರ್ಷವಾಗಿರುತ್ತದೆ. ಆ ಮಕ್ಕಳಿಗೆ ಚೆನ್ನಾಗಿ ಆಟ ಆಡುವ ಅಭ್ಯಾಸವಾಗಿ, ಶಾಲೆಗೆ ಹೋಗುವ ಮನಸ್ಸಿರುವುದಿಲ್ಲ. ಒಂದಿಷ್ಟು ದಿನ ಶಾಲೆಗೆ ಹೋಗುವ ಹಾಗೆ ಮಾಡಿ ನಂತರ ಬಿಟ್ಟು ಬಿಡುತ್ತಾರೆ. ಇಲ್ಲವೇ ಮನೆಯಲ್ಲಿಯೂ ತಾಯಿ ಸರಿಯಾಗಿ ವಿಚಾರಿಸುವುದಿಲ್ಲ ವಾದ್ದರಿಂದ ಸರಿಯಾಗಿ ಓದದೆ ನಪಾಸಾಗುತ್ತಾರೆ.

ಮನೆಗೆಲಸದ ಹೆಂಗಸರಿಗೆ ಸಮಾಜದಲ್ಲಿ ಒಂದು ಗೌರವ-ಪ್ರತಿಷ್ಠೆ ತಂದುಕೊಡುವಂಥ ಸ್ಥಾನಮಾನಗಳಿಲ್ಲ. ಸಾಮಾನ್ಯವಾಗಿ ಆಕೆಯನ್ನು ಆಕೆಯ ಹೆಸರಿಡಿದು ಯಾರೂ ಕೂಗುವುದಿಲ್ಲ. ಮನೆಗೆಲಸದವಳು ಎಂದೇ ಸಂಬೋಧಿಸುವುದು. (ಆದರೆ ಇತ್ತೀಚಿಗೆ ಇಂದಿನ ವಿದ್ಯಾವಂತ ಗೃಹಿಣಿಯರು ಮನೆಗೆಲಸದ ಮಹಿಳೆಯನ್ನು ಗೌರವದಿಂದ ನಡೆಸಿಕೊಳ್ಳುತ್ತಾರೆ).

ಮನೆಗೆಲಸದ ಹೆಂಗಸಿನ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಅವರಿಗೆ ಕೆಲಸದ ಭದ್ರತೆ ಇಲ್ಲ. ತಿಂಗಳಿಗೊಮ್ಮೆ ರಜೆ ಇಲ್ಲ, ಹಾಗೂ ಕನಿಷ್ಟ ಕೂಲಿ ಇಲ್ಲ. ಮನೆಗೆಲಸದ ಹೆಂಗಸರಿಗೆ ಈ ಕೆಲಸ ಅನಿವಾರ್ಯವಾಗಿರುವಂತೆ ಆ ಮನೆಯಾಕೆಗೂ ಇವರ ಕೆಲಸ ಅನಿವಾರ್ಯವಾಗಿದೆ ಎಂಬುದು ಮನೆಯಾಕೆಗೂ ತಿಳಿದಿಲ್ಲ. ಮನೆಗೆಲಸದ ಹೆಂಗಸರಿಗೂ, ಈ ಬಗ್ಗೆ ಅರಿವಿಲ್ಲ. ಆದರೆ ಮನೆಗೆಲಸದ ಹೆಂಗಸರು ತಮ್ಮ ಮನೆಗಳಲ್ಲಿ ಹೆಚ್ಚು ಜವಾಬ್ದಾರಿ ವಹಿಸಿಕೊಂಡಿರುವುದರಿಂದ ಹೆಚ್ಚಾಗಿ ನಿರ್ಧಾರಗಳನ್ನೂ ಇವರೇ ತೆಗೆದುಕೊಳ್ಳುತ್ತಾರೆ. ಆರ್ಥಿಕ ಸ್ವಾತಂತ್ರ್ಯ ಮಧ್ಯಮ ವರ್ಗದ ಮಹಿಳೆಯರಿಗೆ ಹೋಲಿಸಿದರೆ, ಮನೆಗೆಲಸದ ಹೆಂಗಸರಿಗೆ ಹೆಚ್ಚಾಗಿ ಇರುತ್ತದೆ. ಇವರಿಗೆ ಸಾಮಾಜಿಕ ಭದ್ರತೆ ಇರುವುದಿಲ್ಲ. ಇವರು ಎಲ್ಲಾ ರೀತಿಯ ಆರೋಪಗಳಿಗೂ ಸುಲಭವಾಗಿ ಗುರಿಯಾಗುತ್ತಾರೆ.

ಮನೆಗೆಲಸದ ಮಹಿಳೆಯರ ಆರೋಗ್ಯ ಇಲ್ಲಿ ಹೇಳಲೇಬೇಕಾದ ವಿಷಯ. ಇವರಿಗೆ ಪೌಷ್ಟಿಕ ಆಹಾರ ಸಿಗುವುದಿಲ್ಲ. ಮನೆಯಾಕೆ ಕೊಡುವುದು ತಂಗಳು ಅನ್ನ,

ಸತ್ವವಿಲ್ಲದ ಸಾರು - ತರಕಾರಿಗಳು. ಅದನ್ನೂ ಆಕೆ ಮನೆಗೆ ಒಯ್ದು ಗಂಡ ಮಕ್ಕಳಿಗೆ ನೀಡಬೇಕಾದ ಪರಿಸ್ಥಿತಿ ಇರುತ್ತದೆ. ಗಂಡ ಮಕ್ಕಳಿಗೆ ಆದ ಮೇಲೆ ಉಳಿದದ್ದು ತಿಂದು ಎಷ್ಟೋ ದಿನಗಳು ಅರೆ ಹೊಟ್ಟೆಯಲ್ಲಿರುತ್ತಾರೆ. ಒಂದು ವಯಸ್ಸಿನ ತನಕ ಚೆನ್ನಾಗಿ ಕೆಲಸ ಮಾಡಿ 3-4 ಮನೆಗಳ ಬಟ್ಟೆ ಒಗೆಯುವ, ಮನೆ ಗುಡಿಸಿ ಒರೆಸುವ, ಪಾತ್ರೆ ತೊಳೆಯುವ, ಈ ಎಲ್ಲಾ ಕೆಲಸಗಳಲ್ಲೂ ಬೆನ್ನನ್ನು ಬಾಗಿಸಿಕೊಂಡೇ ಇರುವುದರಿಂದ, ಇವರು 35-40 ವರ್ಷಗಳ ಅನಂತರ ಬೆನ್ನು ನೋವಿನಿಂದ ಬಳಲುತ್ತಾರೆ. ನೀರಿನಲ್ಲಿ ನಿಂತುಕೊಂಡು ಕೆಲಸ ಮಾಡುವುದರಿಂದ, ಪಾದಗಳು ಒಡೆಯುತ್ತವೆ. ವೈದ್ಯರ ಹತ್ತಿರ ಸರಿಯಾಗಿ ಹೋಗುವುದಿಲ್ಲ. ವೈದ್ಯರ ಖರ್ಚೂ ಸೇರಿದರೆ, ಮನೆ, ಸಂಸಾರ ಹೇಗೆ ಸಾಗಿಸುವುದು ಎಂದು, ತೀರಾ ಸಹಿಸಲು ಅಸಾಧ್ಯವಾದಾಗ ಮಾತ್ರ ವೈದ್ಯರ ಹತ್ತಿರ ಹೋಗುತ್ತಾರೆ.

ಮನೆಗೆಲಸದವರೇ ಇಲ್ಲದಿರುವ ದಿನವು ಬರಲಿ ಏಕೆಂದರೆ ಆಕೆಗೆ ಸಮಾಜದಲ್ಲಿ ಸರಿಯಾದ ಸ್ಥಾನಮಾನವಿಲ್ಲ ಎಂದು ಆಶಿಸುವವರೂ ಇದ್ದಾರೆ. ಆದರೆ ಇದು ಎಷ್ಟರ ಮಟ್ಟಿಗೆ ಸಾಧ್ಯ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಆದರೆ ಈಗಿನ ನಮ್ಮ ದೇಶದ ಪರಿಸ್ಥಿತಿಯಲ್ಲಿ ಲಕ್ಷಾಂತರ ವಿದ್ಯಾವಂತ ಅವಿದ್ಯಾವಂತ ನಿರುದ್ಯೋಗಿಗಳಿರುವಾಗ ಹೀಗೆ ಸಣ್ಣಪುಟ್ಟ ಕೆಲಸ ಮಾಡಿಕೊಂಡು ತಮ್ಮ ಜೀವನ ಸಾಗಿಸುತ್ತಿರುವ ಈ ಮಹಿಳೆಯರಿಗೆ ಈ ಅವಕಾಶವೂ ಬತ್ತಿ ಹೋದರೆ ಅವರ ಜೀವನ ಹೇಗೆ ನಡೆಯಬೇಕು? ಇವರು ಮುಷ್ಕರ ಹೂಡಿದರೆ ಈಗಾಗಲೇ ಇಬ್ಬಗೆಯ ಹೊಡೆತ ಅನುಭವಿಸುತ್ತಿರುವ ಉದ್ಯೋಗಸ್ಥ ಮಹಿಳೆಯರ ಹಾಗೂ ವಯಸ್ಸಾದವರ ಪರಿಸ್ಥಿತಿ ಹದಗೆಡುತ್ತದೆ. ಆದುದರಿಂದ ಮನೆಗೆಲಸ ಮಾಡುತ್ತಿರುವ ಹೆಂಗಸರನ್ನು ಆ ಉದ್ಯೋಗ ಮಾಡುವುದನ್ನು ತಡೆಗಟ್ಟುವುದಕ್ಕಿಂತ ಆದಷ್ಟು ಅವರಿಗೆ ಅನುಕೂಲವಾಗುವಂತೆ ಕೆಲಸಕ್ಕೆ ತಕ್ಕಂತೆ ಈಗಿನ ಬೆಲೆ ಏರಿಕೆಗೆ ತಕ್ಕಂತೆ ಸಂಬಳ ಮನೆಗೆಲಸಗಳಲ್ಲಿ ಅನುಕೂಲ ಮಾಡಿಕೊಡುವುದು, ರಜದ ವ್ಯವಸ್ಥೆ, ಸಾಲ ಕೊಡುವ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವ ಮೂಲಕ ಅವರ ಜೀವನ ಮಟ್ಟವನ್ನು ಸುಧಾರಿಸಬಹುದು. ಅವರನ್ನು ಕೀಳಾಗಿ ಕಾಣದೆ, ಪ್ರೀತಿ ವಿಶ್ವಾಸಗಳಿಂದ ಮಾತನಾಡಿಸಿ ಅವರಲ್ಲಿ ಆತ್ಮವಿಶ್ವಾಸ ಮೂಡಿಸಿ, ಸಮಾಜದಲ್ಲಿ ಅವರ ಸ್ಥಾನಮಾನವನ್ನು ಬದಲಾಯಿಸಬಹುದು. ಮನೆಗೆಲಸದ ಹೆಂಗಸರ ಅನಿವಾರ್ಯತೆಯನ್ನು, ಅವರ ದುಡಿಮೆಯನ್ನು ಉದಾರವಾಗಿ ಬಳಸಿಕೊಳ್ಳದೆ ಅವರೂ ಈ ಸಮಾಜದ ಸಮಾನ ಪ್ರಜೆಗಳು ಎಂಬಂತೆ ನಡೆಸಿಕೊಂಡರೆ ಅವರ ಜೀವನದಲ್ಲಿ ಬಹುದೊಡ್ಡ ಮಾರ್ಪಾಟನ್ನೇ ತರಬಹುದು.

ಮನೆಗೆಲಸದವರು, ಮನೆಗೆಲಸದವರಾಗಿಯೇ ಮುಂದುವರೆಯಬೇಕಿಲ್ಲ. ಅವರ ಸ್ಥಾನಮಾನಗಳು ಸುಧಾರಿಸುತ್ತಿದ್ದಂತೆ ಅವರು ಹೊಸ ಅವಕಾಶಗಳನ್ನು ಹುಡುಕುತ್ತಾ, ಮನೆಗೆಲಸವನ್ನು ಅರೆಕಾಲಿಕ ಅಥವಾ ಉಪವೃತ್ತಿಯನ್ನಾಗಿ ಮಾಡಿಕೊಂಡು ಮುಂದೆ ಬರಬಹುದು. ಎಲ್ಲಕ್ಕಿಂತ ಮುಖ್ಯವಾಗಿ ಮನೆಗೆಲಸದ ಹೆಂಗಸರಿಗೆ ತಮ್ಮ ಕೆಲಸದ ಮೌಲ್ಯ ಮತ್ತು ತಾವು ಸಮಾಜಕ್ಕೆ ಎಷ್ಟು ಅನಿವಾರ್ಯ ಎಂಬ ಅರಿವು ಮೂಡಿಸುವುದರ ಮೂಲಕ, ಈ ಅರಿವನ್ನು ಅವರನ್ನು ಸಂಘಟಿಸುವುದರ ಮೂಲಕ, ಕಾಯಿದೆಗಳ ಮೂಲಕ ತಂದು ಅವರ ಕೀಳರಿಮೆಯನ್ನು ಹೋಗಲಾಡಿಸಬಹುದು ಹಾಗೂ ಅವರ ಸ್ಥಾನಮಾನವನ್ನು ಉತ್ತಮಪಡಿಸಬಹುದಾಗಿದೆ.

- ಎಂ. ಎಸ್. ಭಾನುಪ್ರಿಯ
ಮೈಸೂರು

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ಯ.

ವಾರ್ಷಿಕ ಚಂದಾ : 40 ರೂ.

ಸಂಸ್ಥೆಗಳಿಗೆ : 75 ರೂ.

ಸಂ. ಮಂಡಳಿ

REGD NO. KRNA 271

BOOK-POST
PRINTED MATTER

ವಿಳಾಸ :
ಮಾನಸ
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು - 560 067